THE BOOK WAS DRENCHED

TEXT PROBLEM WITHIN THE BOOK ONLY

UNIVERSAL
LIBRARY
OU_198933
UNIVERSAL
LIBRARY

THE

# Karnataka Granthamala

**Series No. 40.**

ಕರ್ಣಾಟಕ

# ಕೃಷ್ಣವಿಜಯವ್ಯಾಯೋಗಂ.

ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ

ವಿರಚಿಸಲ್ಪಟ್ಟುದು

" ಚಂ॥ ವೃ॥ ಎರವಿನಪಕ್ಷಮಂ ತಳೆದಿದರ್ಕೆಣೆವಾರದಿದೆಂದು ಲೋಗರಾ।
ಭರಣಮನೇಳಿಪಂತೆ ತನಗಿಲ್ಲದೆ ಸಾರಕವಿತ್ವಮನ್ಯಕಾ ॥
ವ್ಯರುಚಿರ ಪದ್ಯಮಂ ಸಲಿಸಿ ಸತ್ಕವಿನಿರ್ಮಿತ ಪದ್ಯಮಿಂತಿದ।
ಕ್ಕೊರೆಯೆ ಯೆನುತ್ತೆ ಕಾಳ್ಗೆಡೆವನಂ ನಗದಿರ್ಪರೆ ಬಲ್ಲಕಬ್ಬಿಗರ್ "

MYSORE:

PRINTED AT THE G. T. A. PRESS.

1905.

( All rights reserved )

ಕ್ರಯ ೬ ಆಣೆ. ] [ Price 6 Annas.

# ವಿಷಯಸೂಚಿಕೆ

—:o:—

ಕೃಷ್ಣವಿಜಯವ್ಯಾಯೋಗವೆಂಬೀ ಗ್ರಂಥವನ್ನು ಸುಮಾರು ಕ್ರಿ. ಶ. ೧೭೮೦ ರಲ್ಲಿ 'ಅಭಿನವ ಕಾಳಿದಾಸ' ನೆಂದು ಮೈಸೂರು ಸಂಸ್ಥಾನದಲ್ಲಿ ಪ್ರಸಿದ್ಧನಾಗಿ 'ಭಾಗವತ ಚಂಪು' ವನ್ನು ರಚಿಸಿರುವ ಚಂದ್ರಶೇಖರ ಕವೀಂದ್ರನ ಮಗನಾದ ರಾಮಚಂದ್ರ ಕವಿಯು ಸಂಸ್ಕೃತದಲ್ಲಿ ಬರೆದಿರುವನು. ಈತನು ಸ್ಮಾರ್ತಬ್ರಾಹ್ಮಣ. ಸರಸಕವಿಕುಲಾನಂದ ಭಾಣವೇ ಮೊದಲಾದನೇಕ ಗ್ರಂಥಗಳನ್ನು ಈತನೇ ಸಂಸ್ಕೃತದಲ್ಲಿ ಬಹಳ ಸರಸವಾಗಿ ವಿರಚಿಸಿರುವನು. ಈತನ ಕಾಲಾನಂತರ ಸರಸವಾದ ಇಂತಹ ಸಂಸ್ಕೃತ ಗ್ರಂಥಗಳನ್ನು ಇದುವರೆಗೆ ಯಾರೂ ಬರೆದಿಲ್ಲ. ನಾನು ಇದನ್ನು ಈಗ ಕನ್ನಡಿಸಿ ಕನ್ನಡಿಗರಡಿದಾವರೆಗಳಲ್ಲಿ ವಿನಯಪೂರ್ವಕವಾಗಿ ಸಮರ್ಪಿಸಿರುವೆನು.

ಮೈಸೂರು ಗವರ್ನ್ಮೆಂಟ್ ಸೆಕಟೆರಿಯವರಾದ ಮ॥ ರಾ॥ ಯಂ॥ ಶಾಮರಾವ್ ಯಂ. ಯೇ. ಯವರೂ; ಮಹಾರಾಜರವರ ಕಾಲೇಜ್ ಸಹಾಯೋಪಾಧ್ಯಾಯರಾದ ಮ॥ ರಾ॥ ಬಿ. ಸುಬ್ಬರಾವ್ ಬಿ. ಎ. ಯವರೂ ದಯವಿಟ್ಟು ಇದನ್ನು ಕರ್ಣಾಟಕ ಗ್ರಂಥಮಾಲೆಯಲ್ಲಿ ಮುದ್ರಿಸುವುದಕ್ಕೆ ಅನುಕೂಲ್ಯವನ್ನುಂಟುಮಾಡಿ ಕೊಟ್ಟುದರಿಂದ ಇವರ ಉಪಕಾರವು ನನಗೆ ಚಿರಸ್ಮರಣೀಯವಾಗಿರುವುದು.

ಇದರಲ್ಲಿ ನನ್ನ ಪ್ರಮಾದದಿಂದ ಬಿದ್ದಿರಬಹುದಾದ ತಪ್ಪುಗಳನ್ನು ದೋಷಜ್ಞರು ದಯವಿಟ್ಟು ತಿಳಿಸಿದರೆ ಕೃತಜ್ಞತೆಯಿಂದ ಅವುಗಳನ್ನು ಗ್ರಹಿಸಿ ಮುಂದಣ ಮುದ್ರಣದಲ್ಲಿ ನೇರ್ಪಡಿಸುವೆನು.

ನಂಜನಗೂಡು ಶ್ರೀಕಂಠಶಾಸ್ತ್ರಿ,
ಕೃಷ್ಣರಾಜ ಮೊಹಲ್ಲಾ,
ಮೈಸೂರು.

ಶ್ರೀ

# ಪೀಠಿಕೆ.

ಶಾ॥ ವಿ॥ ಪ್ರಾಲೇಯಾಚಲಭಾಗಧೇಯಕಲಿಕಾಸೌದಾಮಿನೀಸಂಕಟ ।
ತ್ಕಾಲಾಂಭೋಧರನಾಶ್ರಿತಾಂಬುಜವನಪ್ರೋದ್ಯತ್ಪ್ರಭಾಭಾಸ್ಕರಂ ।
ವೇಲಾತೀತಕೃಪಾಕಟಾಕ್ಷರುಚಿರಂಶೈಲೇಂದ್ರಜಾಮಾತರಂ ।
ಪಾಲಿಕ್ಕೆಮ್ಮನದಾವಗಂ ಶಶಿಧರಂ ಗಂಗಾಧರಂ ಶಂಕರಂ ॥ ೧ ॥

ಕಂದಂ ॥ ತೊಳಗುವಕನ್ನಡನಾಡೊಳ್ ।
ಪೊಳಲದುಮಹಿಷಾಸುರಾಭಿಧಾಕರಮೆಸೆಗುಂ ।
ವಿಲಸತ್ಕೃಷ್ಣೇಂದ್ರನದಂ ।
ನಲಿದಾಳ್ವಂ ಧರ್ಮದಿಂದೆ ಕವಿಜನನುತ್ಯಂ ॥ ೨ ॥

ಕಂ॥ ಆತನ ಸಭೆಯೊಳ್ ಬಹುವಿ ।
ಖ್ಯಾತಂಗರಪುರನಿವಾಸಿ ಸುಬ್ರಹ್ಮಣ್ಯಂ ॥
ಭೂತೇಶಾರ್ಚನವಿಧಿಸಂ ।
ಪ್ರೀತಂಮೆರೆವಪ್ಪನುಭಯ ಕವಿತಾಚತುರಂ ॥ ೩ ॥

ಕಂ॥ ಆಕವಿಯುದರದೊಳೊಗೆದಂ ।
ಶ್ರೀಕಂಠಾಖ್ಯಂ ಕವೀಂದ್ರ ಜನಕೃತಸಖ್ಯಂ ॥
ಈಕೃಷ್ಣವಿಜಯಮಂ ತಾಂ ।
ಮಾಕಾಳಿಯ ಕೃಪೆಯಿನೊಲ್ದು ಕನ್ನಡಿಸಿರ್ದಂ ॥ ೪ ॥

ಕಂ॥ ಮುನ್ನಾಪ್ರಿಯದರ್ಶಿಕೆಯಂ ।
ಕೆನ್ನಂ ಕೈಗೊಂಡತೆರದೊಳೀಕಬ್ಬಮುಮಂ ।
ಕನ್ನಡಗಬ್ಬಿಗರ್ಕಳ್ ।
ಸನ್ನುತ ಗುಣಶಾಲಿಗಳ್ಪರಿಗ್ರಹಿಸುಗೆತಾಂ ॥ ೫ ॥

ಶ್ರೀ.

ಕ ರ್ಣಾ ಟ ಕ

# ಕೃಷ್ಣವಿಜಯ ವ್ಯಾಯೋಗಂ.

ನಾಂದೀ—

ಸ್ರಗ್ಧರಾವೃತ್ತಂ ॥ ಮೇರೂರ್ವೀಭೃದ್ಧನುಃಕರ್ಷಣವಿಧಿಗೊಳೆಱಳ್ಗೊಪ್ಪುಗಳ್ತಾಗಿತಾಗಲ್ | ಚೀರುತ್ತಂ ಪೂರ್ವಲಂ ಪೊಕ್ಕಿಸಿದುದೆನುತೆ ದೇವಾಸುರಭ್ರಾಂತಿಯಿಂದಂ ॥ ಪೋರಲ್ಕಂಡಾತದಂ ಮುಡಿವ ಸವಿನಗೆಯಿಂ ಮುಪ್ಪೊಳಲ್ಸುಟ್ಟಧೀರಂ | ಗೌರೀಶಂ ಶ್ರೇಯಮಂ ಪಾಳ್ಕೆ ಮಗತಿ ಕರುಣಾಸಾಗರಂ ಚಂದ್ರಚೂಡಂ ॥ ೧ ॥

ಮತ್ತಂ—

ಮ॥ ವಿ॥ ತಲೆಯೊಳ್ ಚಾಂದವೆತಾಳ್ದ ಕೇದಗೆಯೆಸಳ್ಪೋಲ್ ಚಂದ್ರನಾಲೇಖೆಯುಂ | ತಳದೊಳ್ ಕರ್ವಿನಬಿಲ್ಲನಂಕುಶಮನಾ ಪೂಗೋಲುಮಂ ಪಾಶಮಂ ॥ ತಳೆಯುತ್ತಂ ನಲಿಯುತ್ತೆ ವೀರರಸಕಿಂಬಾಗಿರ್ಪ ಮಾಕಾಳಮಂ | ಗಳಮಂ ನೀಡುಗೆಸರ್ವಮಾತೆ ಕರುಣಾದ್ರಾಪಾಂಗೆಯೊಲ್ದಾಗಳುಂ ॥

( ನಾಂದ್ಯಂತದೊಳ್ ಸೂತ್ರಧಾರಂ ರಂಗಕೆ ಸಾರ್ತಂದು ತೆರೆಯುತ್ತಲ್ ತಿರುಗಿ )

ಸೂತ್ರಧಾರಂ—ಆರ್ಯೆ! ಇತ್ತಲ್ಲೈತಾರ.

ನಟಿ—( ರಂಗಮಂ ಸಾರ್ದು ) ಆರ್ಯ! ಇದೇಂ! ನೀನಾವಗಮುಂ ಪೊಳ್ತರೆ ಸಮನಿಸೆ ನಾಟ್ಯಮಹೋತ್ಸವಾಕ್ರಾಂತ ಹೃದಯನಾಗುವೆ ?

ಸೂತ್ರಧಾರಂ— ಪ್ರಿಯೇ! ಆಚ್ಚರಿ ಬಿಚ್ಚರಿ.

ಕಂ॥ ಪಸರಿಸೆ ಕಿರಣಾಳಿಯನಾ |
ಗಸಮಣಿತೇಜಸ್ವಿ ತೊಳಪ ಕಮಲಾಕರದೊಳ್ ॥
ಎಸೆವೆಣೆವಕ್ಕಿಯ ತಂಡುಗ |
ಳ್ಗೆಸೊಗವೊದವಲಾರೊ ನೋಡಿನಲಿಯದಿರಿಳೆಯೊಳ್ ॥ ೩ ॥

ಅದರಿಂ ಶ್ರೀನಗರದೊಡೆಯನ ಶರದುತ್ಸವಮಂ ನೋಡಲೆಳಸಿ ಪಲ ನಾಡುಗಳಿಂದನನ್ಯಲಭ್ಯಮಪೂರ್ವ ಪ್ರಾಗಲ್ಭ್ಯಮಂತಳೆದು ನಮ್ಮ ತಪೋವಿಶೇಷಂ ಪಣ್ತುದೆಂಬ ವಹ್ಲಿಯಿಂ ಬಂದಿರ್ಪ ಸಹಜ ವಿನಯ ಸುಲಭರಾದ ಸಾಮಾಜಿಕರಂ ಪ್ರಾರ್ಥಿಸಿ, ನಮ್ಮ ಬಿಜ್ಜೆಯೊಳ್ಪಿಂಯ ನೀಗಳಾನಿವರಿದಿರೊಳ್ ಬಿತ್ತರಿಸಲೆಳಸಿರ್ಪೆಂ. ಅದು ಕಾರಣಂ ನೀನೆಲ್ಲಮುಮಂ ಸಜ್ಜುಗೊಳಿಪುದು.

ನಟ—ಆರ್ಯ! ಇದು ಯುಕ್ತಂ. ಏಕೆಂದೊಡೆ ;

ಕಂ॥ ಸೊಗಯಿಸದುಜಾತ್ಯಮಾದೊಡ |
ಮೆಱುಗುಮಿಗೆಮಣಿಸಾಣೆಗಲ್ಲೊಳೊರಸುವವರೆಗಂ ॥
ಬಗೆವೊಡೆಮಿಸುನಿಯುಮಂತೆಯೆ |
ಪೊಗರೊಂದದುಪುಟಮನಿಡುವವರೆಗಂ ಶಿಖಿಯೊಳ್ ॥ ೪ ॥

ಅಂತಾಗಿರೆಯುಂ ವಿಶೇಷ ವಿಜ್ಞಾನಪೂರ್ಣರಾದಿಂತಪ್ಪ ಮಹಾತ್ಮರಿದಿರೊಳೆಮ್ಮಲ್ಪ ಪಾಂಡಿತ್ಯಮಂ ಪ್ರಕಟಿಸಲ್ಕಂಜುವೆಂ.

ಸೂತ್ರಧಾರಂ—ಪ್ರಿಯೇ! ಅಂತಲ್ತು ;

ಕಂ॥ ಅರಿವಿಗೆಮುನ್ನೀರೆನಿಸುತ |
ಮರಿಯದೆಮಾತ್ಸರ್ಯ ಕಥೆಯನೆಸೆವೀರಸಿಕರ್ ॥
ಪೆರರರಿವುಕಿರಿದೆನಿಪ್ಪೊಡ |
ಮರರೆಯದಂ ಪಿರಿದೆನುತ್ತೆ ಬೀಱುವರಬಲೇ ॥ ೫ ॥

ನಟಿ—ಆರ್ಯ! ಇದು ದಿಟಂ. ಏತರ್ಕೆಂದೊಡೆ ರಸಗ್ರಹಣದೊಳವರ್ ಕಾತರರಪ್ಪ ನಿಮಿತ್ತಂ ದೋಷಂಗಳ ನಿನಿಸುಂ ಲಕ್ಷಿಸರ್. ಅಂತಪ್ಪುದೈಸೆ;

ಕಂ॥ ರಸಿಕರ್ಕಳಂಕಿಯೆನಿಸಿದ ।
ಸಸಿಯೊಳಗೊಸರ್ವ*ಮರ್ದಿ*ನಿಂದೆತಣಿವರ ಸತತಂ ॥
ರಸೆಯೊಳ್ ಕ್ಷೌದ್ರದ ಪಟಲದಿ ।
ನೊಸವರ್ಪ*ಜೇನ್ನೆಯ್ಯ ನೊಂದಿಕಳಿವರ ಕಸನಂ ॥ ೬ ॥

ಸೂತ್ರಧಾರಂ—ಪ್ರಿಯೇ! ಅದಂತಿರ್ಕೆ. ಈಗಳೀಸಭಾನಾಯಕನಾದ ವೀರರಾಜಕುಮಾರನಂ ದೇವರಾಜನಂ ವೀರರಸೋದ್ಧತಮಾದೊಂದು ರೂಪಕದಿಂ ನಲನಡಿಸಲೆಳಸುವೆಂ.

ನಟಿ—ಆರ್ಯ! ಅಕ್ಕೆ ಅಕ್ಕೆ. ಕೃಷ್ಣವಿಜಯಮೆಂಬ ವ್ಯಾಯೋಗಮುಂ ನವೀನಮೆಂದೆಮ್ಮ ನಟವರ್ಗಮಭಿನಯಿಸಲಾಸೆವಡುತ್ತಿರ್ಪುದು. ಈಗಳದನೆ ಅಭಿನಯಿಪಂ.

ಸೂತ್ರಧಾರಂ—(ವಿಸ್ಮೃತಿಯನಭಿನಯಿಸಿ) ಅದಂ ಸಮೆದ ಕಬ್ಬಿಗನದಾವಂ?

ನಟಿ—ಅದನೆಮಗೆ ನೀನೆಗಡಾ! ಅರಿಪಿದುದು? ಈಗಳೆಂತು ಮರೆತೆ? ಆದೊಡಾಲಿಸು.

ಕಂ॥ ಬುಧಿಯಬೃಹಸ್ಪತಿಯೆನುತಂ ।
ತವೆಪೊಗಳ್ವರ್*ಆರನಖಿಲವಿದ್ಯಾಭಿಜ್ಞರ್ ॥
ಕವಿಕುಲಚೂಡಾಮಣಿಯೆನ ।
ಲನನೆಸೆವಂ ಚಂದ್ರಶೇಖರಾಹ್ವಯರಸಿಕಂ ॥ ೭ ॥

ಕಂ॥ ವಿಲಸದ್ವೆಲ್ಲಾಲಾಹ್ವಯ ।
ಕುಲಶುಕ್ತಿಗೆ ಮುತ್ತಿನಂತಿರೆಸೆವಿಪನಣುಗರ್ ॥
ತೊಳಪರ್ ನೆಗಳ್ತೆವಡೆಯುತೆ ।
ಸಲೆಶಂಕರ ವಿಶ್ವನಾಥ ಗೋಪಾಲಬುಧರ್ ॥ ೮ ॥

ಕಂ॥ ಅನುಜಂ ಮೆರೆವೀಮೂವ ।
ರ್ಗನುವಿಂ ಶ್ರೀ ದೇವತಾಕಟಾಕ್ಷದೆ ವಿದ್ವಾಂ ॥

ಸನೆನುತೆದೊರೆವೆತ್ತೀಮೋ ।
ದಿನದೊಳ್ ಶ್ರೀರಾಮಚಂದ್ರಕವಿ ಮೆರೆದಪ್ಪಂ ॥ ೯ ॥

ಆತನೆಗಳಾ ಇದರ ಕಬ್ಬಿಗಳಗಂ.

ಸೂತ್ರಧಾರಂ—ಆಃ! ಈಗಳೆನ್ನ ತಪಂ ಪಣ್ತುದೈಸೆ; ಈಶರತ್ಸಮಯಮುಮೆಮುವರ್ಕನುರೂಪಮಾಗಿರ್ಪುದು. ಇದೊ;

ಕಂ॥ ಶರದಂಗನೆಕೌರಿಯನೆ ।
ಳ್ಕರಿಸಲ್ ವಿಕಚಾಬ್ಜನೇತ್ರೆ ಕಲಹಂಸಕನೂ ॥
ಪುರದಿಂಚರಮುಂ ಸಾರಸೆ ।
ವರಕಾಂಚಿಯುದನಿಯುಮೊಪ್ಪೆ ಬಂದಪಳೀಗಳ್ ॥ ೧೦ ॥

ಮತ್ತಂ ಕ್ಷಣಿಕಮೆನಿಸಿದ ತಂತಮ್ಮ ತೇಜಮಂ ತೋರಿಸುತೆಯುಂ ವಿಕಟಮಾಗಿ ಗರ್ಜಿಸುತೆಯುಂ ಶರಮಂ ವರ್ಷಿಸುತೆಯುಂ ಚಿತ್ರತರಮೆನಿಪ್ಪ ಚಾಪಮಂ ಮೆರೆಯಿಸುತೆಯುಂ ತಾಗೆಪಟ್ಟೆಯುಮಂ ಪರ್ವತಂಗಳುಮಂ ಮುಸುಂಕಿಪಂಕಮಂ ಪೊಣ್ಮಿಸುತೆಯುಮಿಮ್ಪೀ ನೀರ್ದೇರ್ಗಳ್ತಂಡಂ ಮರುದ್ಯೋಗದಿಂ ಭಗ್ನೋದ್ಯಮಮಾಗಿ ತೊಲದಂತಿರೆ ದಿಗಂತಮಂ ಸಾರ್ದುದು.

ನಟಿ— ಕಂ॥ ಇದೊ ಸನ್ಮಾರ್ಗಮನಲುಬುತೆ ।
ಪೆದುಳದೆ ಬಹುಕಲುಷಮೆನಿಪ ಮಳೆಗಾಲಮನ ॥
ಕ್ಕದೆದಾಳಿಡಿಸುತೆ ಮೆರೆದಪ ।
ಗೊಡವಿದಸಿರಿಯಾಂತು ಸಾರ್ದ ಶರದಂಗನೆತಾಂ ॥ ೧೧ ॥

ಸೂತ್ರಧಾರಂ—ಕಾಂತೇ! ಈ ಕಮಲಾಕರದೊಳ್ಪೈಸೆ;

ಕಂ॥ ಇದೆಕೊಳ್ ಬಕಬೃಂದದಪಾ ।
ಧ್ಯದೊಳಹಹಾ ಮಲ್ಲಿಕಾಕ್ಷನಂಗನೆ ಯೀಗಳ್ ॥
ಬೆದಕುತೆಬೆದರುತೆ ಬಳಸುತೆ ।
ಪೆದಪಿಂ ಕೃಷ್ಣಪದಹಂಸನಂ ಬಳಸಾರ್ದಳ್ ॥ ೧೨ ॥

( ಜವನಿಕೆಯೊಳ್ )

ಎಲೆ ಭರತಪುತ್ರ! ಭಾಪುಭಾಪು! ಈ ಸಂವಿಧೋಪದೇಶಪ್ರತಿಯಿಂ ನೀಂ ಶ್ಲಾಘನೀಯನಲ್ತೆ.

ಸೂತ್ರಧಾರಂ—ಆಃ! ರುಕ್ಮಿಣಿಯನಪಹರಿಸಿಕೊಂಡು ಬರಲೆಳಸಿ ಅವಳ್ಗಳು ಪಿದನೇರಿದನೊಳ್ಪುಡಿಗೊಡುವ ಕೃಷ್ಣನ ವೇಷಮಂ ತಳೆದು ನಮ್ಮ ರಂಗತರಂಗಂರಂಗಮಂ ಪುಗುತಿರ್ಪಂ. ಆದರಿಂದಾಮುಂ ಮುಂದಣ ವೇಷಂಗಳನನುಜಿಯದ್ದಪಂ (ಎಂದಿರ್ವರುಂ ತೆರಳ್ದರ್)

ಇದು ಪ್ರಸ್ತಾವನೆ.

(ಅನಂತರ ಹುಗ್ನಿದ್ಯೋತನನೆಂಬ ಪಾರ್ವನೊಳ್ ಸೊಲ್ಲಿಸುತೆ ಕೃಷ್ಣಂ ರಂಗಮಂ ಸಾರ್ದರ್.)

ಕೃಷ್ಣಂ—ಎಲೆ ಸುಬ್ರಾಹ್ಮಣ! ಆಕಲವಾಣಿ ನಿನ್ನೊಳೇನುಸಿರ್ದಳ್?

ಅಗ್ನಿದ್ಯೋತನಂ—ವತ್ಸ! ಆಲಿಸು.

ಕೃಷ್ಣಂ—ಎಲೆ ಪಿರಿಯ! ಅವಹಿತನಾಗಿರ್ಪಂ.

ಅಗ್ನಿದ್ಯೋತನಂ—ಆಕೆಯ ಜನಕಂ ಭೀಷ್ಮಕಂ ಜ್ಯೇಷ್ಠತನಯನಪ್ಪ ರುಕ್ಮಿಯ ಮಾತನಪ್ಪಿಕೆಯಿಂ ರುಕ್ಮಿಣಿಯಂ ಚೈದ್ಯಂಗುಪಯಮಮನೆಸಗುವುದೊಳ್ಪೆಂದೆಣಿಸಿರ್ಪಂ.

ಕೃಷ್ಣಂ—(ನಗುತೆ) ನಾನುಂ ಚೈದ್ಯಂ ಗುಪಯಮಪ್ರಾಪ್ತಿಯಾಗಿಸಲನುಗೆಯ್ವೆಂ. ಅನಂತರಮನಂತರಂ?

ಅಗ್ನಿದ್ಯೋತನಂ—ಆಕೆಯಾದೊಡೆ;

ಮ॥ ವಿ॥ ಅನಿಶಂ ನಿನ್ನನೆ ಜಾನಿಸುತ್ತೆಸಗುತಂ ಸತ್ಕಾರಮಂ ಬಟ್ಟೆಗ ।
ರ್ಗನುವಿಂದಾಲಿಸಿ ನಿನ್ನುದಂತಮನವರ್ಪೇಳುತ್ತಿರಲ್ ಪೊಣ್ಮಿಕ ॥ ಧ್ವನಿರೋ
ಮಾಂಚಿತೆಯಾಗಿ ಗದ್ಗದಮದುಣ್ಮಲ್ ಕಣ್ಗಳಂಮುಚ್ಚುತೊಂ । ದಿನಿಸಂ
ತೊಟ್ಟನೆ ಕೆನ್ನೆಯುಂ ಬೆಮರ್ದಿರಲ್ ತಾಳ್ವಳ್ ಗಡಾನಂದಮಂ ॥ ೧೩ ॥

ವೃತ್ತಂ—

ಮ|| ವಿ|| ನುಡಿಸಲ್ ಮಾರ್ನುಡಿಯುಳ್ ಗಡಾಗೆಳತಿಯೊಳ್ಪ್ರಾಣಮುಂ ತಾಯೊಳ್ | ದೊಡಮಾತಂದೆಯೊಳಾದೆಡಂ ಬಿಯದಿಯಂ ಪೇಳ್ ಬಳಲ್ಗಂ ವಲಂ || ನಿಡುಸುಯ್ಯುಂ ಕರಿದಾಗೆ ಚೆಂದುಟಿಯೊಳಲ್ಲೊಪ್ಪಲ್ ಕುರುಳ್ಗಂಬಲುಂ | ಕಡುಬಾಡಿರ್ದಮುಖಾಬ್ಜಮುಂ ಪಿಡಿದಪಳ್ ಕೆಯ್ಯೊಳ್ ಮಹೀವಲ್ಲಭಾ || ೧೪ ||

ವೃತ್ತಂ—

ಮ|| ವಿ|| ಗಿಳಿಯೊಳ್ ಸೊಲ್ಲಿಸಳಾದರಂ ಬಡೆದುಪಾಡಳ್ ಬೀಣೆಯುಂ ಬಾಜಿಸಳ್ | ನಲವಿಂ ಕೇಳಿಯಶಾರಿಕಾವಚನಮುಂ ಮೆಚ್ಚುತ್ತೆ ತಾನಾಲಿಸಳ್ || ಎಳಸಳ್ ಚಿತ್ರಮನಂದದಿಂ ಬರೆವುದಂ ಮಾತಾಡೆತನ್ನಾಳಿಯರ್ | ಮುಳಿವಳ್ ಸುಯ್ದಪಳಂಜುವಳ್ ಸತತಮುಂ ಜಾನಿಪ್ಪೆ ಪೇಳ್ದಪೆಂ || ೧೫ ||

ವೃತ್ತಂ—

ಚಂ|| ಮಾ|| ಪದುಳದೆ ನಿನ್ನನಾಬಲನೆ ಜಾನಿಸಿ ಜಾನದ ದಾರ್ಢ್ಯದಿಂದೆ ನೀಂ | ನಿವಿರ್ದರೆ ಲಜ್ಜೆಗೆಯ್ದು ತೆಗೆದಪ್ಪುತೆ ನಿನ್ನೊಡಲಂ ಸಮಂತು ಪೂ || ಣ್ಮಿದಕಡುರಾಗದಿಂದೆ ಮರುಳಾಗುತೆ ಭೀತಿಪಡುತ್ತೆ ನಾಣ್ಚುಕಂ | ಪದ ಮೊಗಮೊಪ್ಪಿ ಕಣ್ಗೊಳಿಸೆ ತನ್ನೊಳಗೇನನೊ ತಾನೆಸೊಲ್ಲಿಪಳ್ || ೧೬ ||

ಕೃಷ್ಣಂ—(ಆಲಿಸಿ ಪೊಂಪುಳಿವೋಗಿ) ಎಲೆ ಮಹಾ ಬ್ರಾಹ್ಮಣ! ಎಲ್ಲಮುಮಂ ಸಂಕ್ಷೇಪಮೊಡರ್ಚಿ ಆವಳ ಸಂದೇಶಮನೊಂದನೆ ಪೇಳ್.

ಅಗ್ನಿದ್ಯೋತನಂ—ಬಿತ್ತರದಿಂದೇಂ ಫಲಂ ಅವಳತಿವಿಹ್ವಲೆಯಾಗಿ ನಿನಗೆ ಬಿನ್ನವಿಸಲ್ಕೆಂದೆನ್ನೊಳಿಂತೊರೆದಳ್ ;

ಮ|| ವಿ|| ಕುಲಮುಂ ಲಜ್ಜೆಯುಮುಂ ಕಡಂಗಿಬಿಡುತಂ ತೂಲಂಬೊಲಾಶೀಲಮುಂ | ಕಳೆಯುತ್ತಂಜಲಿಬದ್ಧೆಯಾಗುತೆರೆವಂ ನಿನ್ನಂ ಮನೋವಲ್ಲಭಾ || ಚಳಕಂಬೆತ್ತೊಲವಿಂದೆ ಸಾರ್ದರಿಗಳಂ ಪಾಳೆಳಸುತ್ತಾಜಿಯೊಳ್ | ಖಳರಂ ಮರ್ದಿಸಿ ನನ್ನನಾದರದೆ ಕೈಗೊಳ್ಳು ಜಯಶ್ರೀಯೊಡಂ || ೧೭ ||

ಕೃಷ್ಣಂ—(ಆಲಿಸಿ ಸಂಭ್ರಮದಿಂತೆರೆಯುತ್ತುಲ್ ತಿರುಗಿ) ಆದಾರತ್ತುಲ್ ?

ಪಡಿಯರಿತಿ—(ಕೃಷ್ಣನಂಬಳಿಸಾರ್ದು, ಇದೆ ಬಂದೆಂ. ಆಳ್ದರಾಣತಿಗೆಯ್ವುದು.

ಕೃಷ್ಣಂ—ಸಾಂಗ್ರಾಮಿಕ ರಥಮುಂ ಚಚ್ಚರಮನುಗೆಯ್ವುದೆಂದು ಸೂತಂಗೆ ಬೆಸೆಸ.

ಪಡಿಯರಿತಿ—(ಆಣತಿ ಎಂದು ಪೋಗಿ ಪ್ರತ್ಯಂ ದಾರುಕಂ ಬೆರಸುಬರುದು) ಎಲೆ ದಾರುಕ! ಇತ್ತಲಿತ್ತಲೆಮ್ಮಾಳ್ದರ್.

ದಾರುಕಂ—(ಕೃಷ್ಣನಂನಿರೀಕಿಸಿ) ಕುಮಾರಂಗೆ ಗೆಲವಕ್ಕೆ. ಗೆಲವಕ್ಕೆ. ರಥಮನನುಗೆಯ್ದಿರ್ಪೆಂ.

ಕೃಷ್ಣಂ—ಎಲೆದಾರುಕ! ಸಜ್ಜುಗೆಯ್ದಿರ್ಪ ರಥಮನೇರಲ್ ಬಯಸುವೆಂ.

ದಾರುಕಂ—ವತ್ಸ! ಕಂ॥ ಘನಚಕ್ರವೈಜಯಂತೀ ॥
ಕನಕಾಂಬರ ಹೃದ್ಯಮೆನಿಸಿ ಬಗೆಗೊಳ್ವೀತೇರ್ ॥
ಮಿನುಪುದುನಿನ್ನಂತಿರೆವೋಲ್ ।
ಲನುಗೊಳುತಂರಿಪುವಿಜಯದೊಳ್ಲೆಸಗದೊಡೆಯಾ ॥

ಕೃಷ್ಣಂ—(ರಥಮನೇರಿ) ಎಲೆದಾರುಕ! ಕುದುರೆಗಳಂ ಚಚ್ಚರಂ ನಡೆಯಿಸು.

ದಾರುಕಂ—(ರಶ್ಮಿಶ್ಲಥನಂಗೆಯ್ದು) ಎಲೆ ಕುಮಾರ! ನೋಡು ನೋಡು

ಮ॥ ವಿ॥ ಕಿಳರ್ದೆಣ್ದಿಕ್ಕುಗಳಂ ಪಳಂಚಲೆಯಿಸುತ್ತುತ್ತು ಕರ್ಣಂಗಳಂ । ಚಲಿಪಾಪ್ರೋಥದೆಘುರ್ಘುರಧ್ವನಿಯುಳುಂಬು ಮೂಡಿರಲ್ ಧೂಳಿಯುಂ ॥ ಮಿಳಿರಲ್ ಫೇನಮುದುಙ್ಮುತಾಲುಯುಗದೊಳ್ ಮೇಲೆತ್ತಿ ಬಾಲಂಗಳಂ । ಚಳಕಂಗೊಂಡಿದೆ ಪಾರುಗುಂ ಗಗನದೊಳ್ ತ್ವದ್ವಾಜಿಗಳ್ ಪಕ್ಕಿವೊಲ್ ॥ ೧೯ ॥

ಕೃಷ್ಣಂ—(ರಥವೇಗಮಂ ನಿರವಿಸಿ)

ಕಂ॥ ಕಡಲೊಳ್ಜಂಝಾನಿಲನಿಂ ।
ಪಡೆಂಗುತಾಂಪಾಯ್ವತೆರದೊಳೀತುರಗಂಗಳ್ ॥

ಕಡುಬೇಗದೆಪೊರುಗುವಿಾ ।
ಗಡಜವನಿಷ್ಪಂದಕೇತುವೆನಿಸುತೆದಿವದೊಳ್ ॥ ೨೦ ॥

ದಾರುಕಂ—ಎಲೆವತ್ಸ !

ಮ॥ ವಿ॥ ಬಗೆಕಂಡೀರಥವೇಗಮಂ ವಿವಿಧ ಶಂಕಾವಿಹ್ವಲಂ ಸೂಕ್ಷ್ಮ ಮಾ।ಯ್ತುಗಡಾ ಗಾಳಿಯುಮಾತ್ತಗಂಧಮೆನಸುಂ ಕಣ್ಗಳ್ಗೆ ಮೆಯ್ದೋರದೈ॥ ತೆಗೆಯೇಕೀ ಪಲಮಾತುಗಳ್ ಖಗಪನುಂ ನೀಡುಂವಿರೂಪನಾದನಾ । ಯ್ತಗೆ ಸಂಚಾರದಿ ನಾಮುಹಾ ಬಿಲದೊಳನ್ನೇವಣ್ಣಿಪೆಂ ವೇಗಮಂ ॥ ೨೧ ॥

ಮತ್ತಮೀರಥವೇಗದಿಂದೀಗಳೈಸೆ ;

ಕಂ॥ ಪೊರೆಯೊಳ್ ದಟ್ಟೈಸಿರ್ಪೀ ।
ತೆರುಗಳ್ದ್ವಿಜ ಕಲಕಲಂಗಳಂ ತಾಳ್ದುಭವ ॥
ಚ್ಚಿರದೊಳ್ ಚೆಲ್ವಿದು ಮಾರ್ಗಳ ।
ನುರುಪಲ್ಲವಹಸ್ತದಿಂದ ಮಾದ್ರಾಕ್ಷತೆವೊಲ್ ॥ ೨೨ ॥

ಕೃಷ್ಣಂ—(ಸಂತಸಂಗೊಂಡು) ಈ ನಿನ್ನ ನುಡಿಯಿಂದೆನ್ನ ಕಜ್ಜಮೆಲ್ಲಮುಂ ಕೈಸಾರ್ದಂತೆ ಬಗೆವೆಂ.

ದಾರುಕಂ—(ಸುತ್ತಲುಂ ನಿಟ್ಟಿಸಿ ಬೆಕ್ಕಸಂಗೊಂಡು).

ಮ॥ ವಿ॥ ರಸೆಯೊಳ್ ಸಿಂಧುರಪೊದಘಟ್ಟನೆಯಿನಾದಂಧೂಳಿಮೂಡು ತ್ತಮಾ । ಗಸಮಂತಳ್ತಡರುತ್ತಿರಲ್ ಕಡಗುತಂ ತಂತಮ್ಮ ಸೈನ್ಯಂಗಳಂ ॥ ವಸುಧಾಧೀಶ್ವರರಳ್ತಮಟ್ಟು ಬಗೆಗೊಳ್ವಂತೀಕೆ ಸಾಲಾಗಿಯೋ । ಜೆಸುತಿರ್ಪ ರ್ಮಿಸುಪೆಣ್ಪು ದಿಕ್ಕುಗಳೊಳಂ ರಾಜಾಧಿರಾಜಾರ್ಚಿತಾ ॥ ೨೩ ॥

ಕೃಷ್ಣಂ—(ತನ್ನೊಳ್ನಿರಪಿಸಿ) ಆಃ ! ರಥವೇಗದಿಂ ಮಾರ್ಗದೈರ್ಘ್ಯಮನರಿಯದೆ ಕುಂಡಿನನಗರಮಂ ಬಳಸಾರ್ದಿರ್ದೆವಲ್ತೆ. ಭೀಷ್ಮಕನಾಣತಿಯಂತೆ ರುಕ್ಮಿಣೀ ಪರಿಣಯೋತ್ಸವ ನಿಮಿತ್ತಮಿವರ್ ಪಲನಾಡುಗಳಿಂ ಬಂದಿರ್ದನರಪತಿಗಳ್ಗಡ !

ದಾರುಕಂ—(ಮುಂತೆ ನೋಡಿ) ಎಲೆದೇವ! ಸಜ್ಜುಗೊಳ್

ಚಂ|| ಮಾ|| ಮಿಳಿರ್ಪ*ಪತಾಕೆಯಿಂ ದೊಗೆದೆಲರ್ ಕಡೆಲ್ಲಮುನ್ನೈದೆ ಪೊಣ್ಮೆಸಲ್ | ತೊಳಪಸರಿರ್ಪ್ಪುರೀನಿವಹಮುಂ ರಜಮೊಯ್ಯನೆತಳ್ತು ಬತ್ತಿಸಲ್ || ವಿಲಸಿತಕುಂತ ಸಂತತಿಗಳಿಂದ್ದೆಸೆಯಲ್ಲಿಯುಂ ಮೊಪ್ಪೆಮಾರ್ಬಲಂ | ಕಲಕಲದಿಂದೆ ಭೀತಿಗೊಳಿಸುತ್ತಿದೆ ಬಂದಪುದೇನೋಡಚರ್ಯಮೈ | ೨೪ ||

ಕೃಷ್ಣಂ—(ನಿಟ್ಟಿಸಿ) ಎಲೆಸೂತ ! ಆರ್ಯನಪ್ಪ ಬಲರಾಮನೆಮ್ಮಾಗಮನವಂ ಕರ್ಣಾಕರ್ಣಿಕೆಯಾಗಿ ಕೇಳ್ದು ನಮ್ಮಂ ನೀಕ್ಷಿಪಬಯ್ಕೆಯಿಂ ದಿತ್ತಲ್ಕೆ ತರ್ಪಂತಿರೆ ಕಾಣ್ಬುದು.

ದಾರುಕಂ—(ಮತ್ತಂ ನಿರುಕಿಸಿ, ವಿಸ್ಮಯಂಗೊಂಡು)

ಮ|| ವಿ|| ಅಮುಮಾ ದಿಗ್ಗಜ ಮಂಡಳಕ್ಕೆ ಕಿವುಡಂ ಥಕ್ಕ್ಯಾಸ್ವನಂಪೊರ್ದಿಸಲ್ | ಕ್ರಮದಿಂ ಕಾಹಳಕಾಹಳಾಹಳ ರವಂ ಸಾರುತ್ತೆ ನಕ್ಷತ್ರಮಾ|| ರ್ಗಮನಾದಂ ಪದಪಿಂದೆ ತೀವುತಿರೆ ಮೇಣ್ ಬಾಗಲ್ ಚಮೂಭಾರದಿಂ | ಕಮಠಂ ಶೇಷನಗೋಣ್ ವಲಂ ಮುರಿಯಲೀ ಸಂಕರ್ಷಣಾಂ ಬಂದಪಂ || ೨೫||

( ಬಳಿಯಂ ನಿಜಬಲಮಸೊಡಂಗೊಂಡು ಬಲರಾಮಂ ಬಂದು )

ಬಲರಾಮಂ—ಎಲೆ ವತ್ಸ, ಪರಿಣಯೋತ್ಸವ ನಿಮಿತ್ತಂ ಬಹುವೀರ ಭಯಾನಕಮಾದ ಮಾರ್ಪಡೆಯೊಳ್ಪೊಣರಲೆಳಸಿ ನೀಂ ಬಂದಿರ್ಪೆಯೆಂಬುದನಾಲಿಸಿ ಸಂಭ್ರಮದಿಂದೆನ್ನ ಬಲಮಂ ಕೊಂಡು ಬಂದಿರ್ಪೆಂ.

ಕೃಷ್ಣಂ—ಶಿಶುಪಾಲ ಜರಾಸಂಧ ಸಾಲ್ವ ಪೌಂಡ್ರಕಾದಿ ನಿಗೂಢಯಾತುಧಾನರ್ಕಳ ಅನೇಕಾಕ್ಷೋಹಿಣೀ ಬಲದ ಭಾರದಿಂ ರಸ್ನವಸಿರಳತಿಕ್ಷುಣ್ಣೆಯಾಗಿರ್ಪ ಕಾರಣ ದಾನವರ್ಗಳ ದಪ್ಪಮಂ ನೈಗರೆಯಿಸಿ ಬುವಿಗೊದವಿರ್ಪುದ್ವೇಗಮಂ ಪೋಗಾಡಿಸಲ್ಕಿಂತು ಗೆಯ್ದಿರ್ಪೆಂ. ಚೈದ್ಯಂಗಿತ್ತು ಮದುವೆ ಗೆಯ್ಯಲ್ಕೆಳಸಿರ್ಪಾಕನ್ನೆಯಂ ನಾಂ ಬಲ್ಮೆಯಿಂ ಸೆಳೆದುತರ್ಪೆಂ. ಅನ್ನೆವರಂ ನೀನೆನ್ನಾಗಮನಮಂ ನಿರೀಕ್ಷಿಸುತಿರ್ಪುದು.

ಬಲರಾಮಂ—ಅಂತೆ ಅಕ್ಕೆ. ಪೆರತೇನೆ-ದೊಡೆ ನೀನಲ್ಲಿ ಜಾಗರೂಕನಾಗಿರ

ವೇೞ್ಕುಂ.

ಕೃಷ್ಣಂ—ಆರ್ಯನಾಣತಿ (ಎಂದು ತಲೆದೂಗಿ ಮುಂತೆ ನಿಟ್ಟಿಸಿ) ಎಲೆ ದಾರುಕ!

*

ಚಂ ॥ ಮಾ॥ ಕರಿಗಳಗಂಡದಿಂದೊಸರ್ವದಾನಜಲಕ್ಕೆಳಸುತ್ತೆ ಭಂಭ

ರಂ। ನೆರೆದು ಕಡಂಗಿ ಝುಂಕೃತಿಯೊಡರ್ಚುತಿರಲ್ ಬಗೆಗೊಂಡು ತೋ

ರ್ಪಬಾಂ॥ ದೊರೆದೆರೆಯಂತೆ ವ್ರೇಲ್ಲಿತಮೆನಿಪ್ಪ ತುರಂಗದ ಮಂಡಲಂಗಳಾ।

ಖರಖುರಜಾತ ಧೂಳಿ ಮುಸುಕಲ್ ಪುರವೆಸಪ್ಪುಗುಮೀಗಳೆತ್ತಲುಂ ॥ ೭೬ ॥

(ಜವನಿಕೆಯೊಳ್)

ಚಂ॥ ಮಾ॥ ಪಳವಿಗೆಯಿಂದಲಂಕರಿಪ್ರದಾನೆಲೆ ಮಾಡಮನಂದದಿಂಸನಂ।

ಗೊಳಸುವ ತೋರಣಂಗಳ ನಲಂಕೃತಿಗೆಯ್ದುದು ರಾಜಮಾರ್ಗಮಂ ॥ ತೊ

ಳಗುವ ರತ್ನಕುಟ್ಟಿಮದೆ ಸೂಸುತೆ ಪೂಗಳನ್ನೈದೆ ತಂದಲಂ। ತಳವುದು ಪೌ

ರರೆಲ್ಲರನುಮಿಂ ಮೆರೆಮೀನಗರಪ್ರತೋಳಿಯೊಳ್ ॥ ॥ ೭೭ ॥

ದಾರುಕಂ—ಎಲೆ ಕುಮಾರ! ಇದು ಪೊಳಲನಲಂಕರಿಪ ಕಜ್ಜದೊಳುದ್ಯು

ಕ್ತರಾದ ಕಂಚುಕಿಗಳ ಕಲಕಲಂ.

(ಮತ್ತಂ ಜವನಿಕೆಯೊಳ್)

ಚಂ॥ ಮಾ ॥ ಕರಿತುರಗಂಗಳಂ ಮಿಸುಪರಂಜೆಗುಳಂಗಳನೊಪ್ಪು

ವಂತೆ ಸಿಂ। ಗರಿಪ್ರುದು ತೇರ್ಗೆ ಸಾರ್ಚುವುದು ವೇಗಿಯೆನಿಪ್ಪ ತುರಂಗ

ಸಂಘಮಂ!ನರಪತಿಯಾತ್ಮಜಾತೆ ಗಿರಿಜಾಲಯಕಿಂದು ತೆರಳ್ವದೂಸರಿಂ। ಪು

ರುಪಟಹಾರವಂ ಮೊಳಗುಗೊಯ್ಯನೆ ತೀವುತೆನಾಲ್ಕುದಿಕ್ಕುಮಂ ॥ ೭೮ ॥

ಕೃಷ್ಣಂ—(ಮುಂತೆ ನಿಟ್ಟಿಸಿ) ಇದೊ ಆಕಲವಾಣಿ ಸಾರ್ತಂದಳ್. ಎಮ್ಮ

ಸಾಸಮುಂತಲೆದೋರಲ್ಕಿದುವೆ ತಕ್ಕಕಾಲಂ.

(ಬಳಿಕ್ಕೆ ಪೂಜಾ ಸಾಮಗ್ರಿಗಳಂ ಪಿಡಿದು ಬರುತಿರ್ಪ ಸೊಮಾಸಿಣಿ

ಯರ್ಗೆರಸು ವಿವಾಹಭೂಷಣಾಲಂಕೃತೆಯಪ್ಪ ರುಕ್ಮಿಣಿ ರಂಗಮಂ

ಸಾರ್ದು ॥

ಮ॥ ವಿ॥ ಮಣಿಸಿಂಹಾಸನಮಂ ಸಮರ್ಪಿಸುತೆ ಜಾನಂ ಗೆಯ್ದು ತ ನ್ನಾಮನಂ । ತಣಿವಂತರ್ಘ್ಯಮನಿತ್ತು ಮೀಯಿಸುತೆ ಗಂಗೋದಂಗಳಿಂ ವ ಸ್ತ್ರಭೂ । ಷಣಮಂ ನೀಡುತೆ ಪೂಸಿಗಂದಮನೆ ಊರಲ್ದಿತ್ತೈದೆ ಭಕ್ಷ್ಯಾದಿ ಯುಂ । ಮಣಿದಳ್ ವೀಟಕೆಯುಂ ಕಡಂಗಿಕುಡುತಂ ಗೌರೀಪದಾಂಭೋಜ ದೊಳ್ ॥ ॥ ೨೯ ॥

ಕಂ॥ ನಲಿದು ಸುವಾಸಿನಿಯರ್ಗಂ॥
ಸಲೆ ವಸ್ತ್ರಾಭರಣ ಶೂರ್ಪತತಿಗಳನೊಲ್ದು ॥
ತ್ತಲಸದೆಯುಪರಾಶಿಷಮಂ ।
ತಲೆಯೊಳ್ ಹರಿತನಗೆ ನಲ್ಲನೆನಿಸಿಲ್ಕಾಂತಳ್ ॥೩೦।

(ಅನಂತರಂ ಸಂತಸದಿಂ ಕಣ್ಗಳಂ ಮುಚ್ಚಿಕೊಂಡು ಅಂಜಲಿ ಬದ್ಧೆಯಾಗಿ )

ರುಕ್ಮಿಣಿ— ಕಂ। ಕರುಣಾಲಯೆ ಮಂಗಳನಿಧಿ ।
ಗಿರಿಜೇತ್ರೈಲೋಕ್ಯ ಜನನಿ ನಿನ್ನಡಿಗಳ್ಗಂ ॥
ನೆರಗುವೆನೆಲರುಣಿವಳ್ಗೆ ಗ ।
ನೆರೆಯುನೆನಿಕ್ಕನಗೆ ನಿನ್ನನಲ್ವರಕೆಗಳಿಂ ॥ ೩೧ ॥

(ಇಂತು ಪ್ರಾರ್ಥಿಸಿ ದೀನಾನನೆಯಾಗಿ ನಾಲ್ದೆಸೆಯುಮಂ ನಿಟ್ಟಿಸುತಿರ್ದಳ್ )

ಕೃಷ್ಣಂ—(ನಿರವಿಸಿ)

ಮ॥ ವಿ॥ ನಲವಂ ಬೀರುಗುಮ ಕ್ಷಿಯುಗ್ಮಕದರಿಂದಾರಯ್ಯಲಾಂ ತೋರುವಾ ॥ ಸೆಳೆಮಿಂಚಲ್ತು ಪಗಲ್ಗಡೀಗಳದರಿಂ ಬೆಳ್ದಂಗಳಲ್ತಾಹತಾಂ॥ ಚಲಿಸುತಿರ್ಪುದರಿಂದೆ ಹೇಮಲತೆಯುಂ ಮೋಣಲ್ತುದೇವಣ್ಣಿಪೆಂ।ಮಲಗೋ*ೞಲಂ ಸಮೆದಿರ್ಪ ಮಾಯೆಯೆನುತಾಂ ಭಾವಿಪ್ಪೆ ನೀರೂಪಮಂ । ೩೨ ॥

ದಾರುಕಂ—(ಸನ್ನೊಳ್)

ಕಂ॥ ಶೌರಿಯುಮೀಕ್ಷಿಸುತೆಸೆವೀ ।
ನೀರೆಯುರೂಪಂ ವಿಲಕ್ಷಣಾದುದರಿಂದಾ ॥

ನಾರಯ್ಯೆಸೊಗಯಿಪಾ ಅ |
ಕ್ಷೀರಾಬ್ಧಿಜೆಯಾದ ಕಮಲೆಯಂತಿರೆ ತೋರ್ಗುಂ॥೩೩॥

(ಪ್ರಕಾಶಂ) ಎಲೆ ಕುಮಾರ! ಇವಳಂ ಕಾಪಿಡಿವುದರೊಳ್ ರಾಜನ್ಯೆಹತಕರ್ ಜಾಗರೂಕತೆಯಂ ಕೈಗೊಂಡಿರ್ಪುದಂನೋಡ.

ಕಂ॥ ಕರಿಗಳಘಟೆಯುಂ ಕುದುರೆಯ |
ತುರುಗಲುಮಾತೇರ್ಗಳುಂದಲುಂ ಸಾಸದಿನಿ ॥
ಬರ್ರಿಯೊಳ್ಸಲಪುತೆ ಬರ್ಕುಂ |
ವರಪೇಟಾದ್ಯಾಯುಧಂಗಳೊಂದಿದ ಭಟರುಂ ॥ ೩೪ ॥

( ಕೃಷ್ಣಂದಪ್ಪದಿಂ ಮುಳಿದು ಕೂರಸಿಯು ನೊರೆಯಿಂದುರ್ಜಿಮುಂಬರಿದು ವ್ಯೂಹಗರ್ಭಮಂ ಭೇದಿಸಿ, ಆದಿ ವರಾಹಂ ಮುನ್ನೀರೊಳಪ್ರೊಕ್ಕು ಧರಣಿಯಂ ತಂದಂತಿರೆ ಮರುವಸಲರ ಪಡೆಯನೊಳವುಗು ತೊಕ್ಕಲಿಕ್ಕಿ ರುಕ್ಮಿಣಿಯ ನೊಡಂಗೊಂಡನುಪಹತ ಮನೋರಥನಾಗಿ ವಿಜಯಶಂಖಮಂ ಪೂರೈಸಿದಂ. ಆಗಳ್ಳೈಸೆ;

ಉ॥ ಮಾ॥ ಶೌರಿಯ ಶಂಖನಿಸ್ವನದೆ ಧಾರಿಣಿಯಂಜೆ ನಡುಂಗಲಂಬರಂ
ಮಾರುಲಿಯಲ್ ಕೆಲರ್ನಡುಗಿದರ್ಕೆಲರಾಯ್ಯುನುರುಳ್ದರುರ್ವಿಯೊಳ್ ॥
ಪಾರಿದರಂಜೆ ಮತ್ತೆ ಕೆಲರೊಯ್ಯನೆ ಮೂರ್ಛೆಗೆ ಸಂದರಿಂ ಕೆಲರ್ ॥ ಚೀರಿ
ಡುತಿರ್ದರಾಹಕೆಲರೆಂತುಟೊ ಶಂಖಗಭೀರನಿಸ್ವನಂ ॥ ೩೫ ॥

( ಜವನಿಕೆಯೊಳ್ )

ಎಲೆ ಸತ್ಯಸಂಧರಾಗಿಯುಂ ಸಾಸಿಗಳಾಗಿಯುಂ ಮನೇಕಾಕ್ಷೋಹಿಣೀಬಲದೊಡೆಯರಾಗಿಯುಂ ಸಾಯುಧರಾಗಿಯುಂ ಪಂದಿಸಂದೋಹ ಜೇಗೀಯಮಾನವಾದ ಪರಾಕ್ರಮಮಂ ತಳೆದರಾಗಿಯುಂ ಮಿರ್ಪ ನಮ್ಮ ನಂಟರೆನಿಸಿದ ಜರಾಸಂಧಾದಿಗಳಿರಾ !!! ನೀವೆಲ್ಲರುಮಾಯುಧಂಗಳಂ ಪಿಡಿದೆತ್ತಲುಂ ಕಾಪುಗೆಯ್ಯುತಿರ್ದೊಡಂ ಮದುವೆದೊಡವಂ ತೊಟ್ಟಿರ್ದ ರುಕ್ಮಿಣಿಯ

ನೊರ್ವಂತುರುವಳಂ ಧೈರ್ಯದಿಂದಪಹರಿಸಿದನೆಂಬುದಿದು ತಕ್ಕುದೇಂ? (ಎಂದುಸುಯ್ದು) ಛೀ ಛೀ ಈ ತೋಳ್ಗಳಿಂದೇಂ ಫಲಂ? ಈ ಶಸ್ತ್ರಂಗಳಿಂದೇಂ? ಕೃಛ್ರಸಂಪಾದಿತಂಗಳಾದೀಯಸ್ತ್ರಂಗಳಿಂದೇ? ಈ ಮದಬಂಧುರಂಗಳಾದ ಸಿಂಧುರಂಗಳಿಂದೇಂ? ಎಲರುಮನೆಲರುಣಿವಗೆಯುಮನು ಮಂಚಾಳಸಿರ್ಪೀ ಕುದುರೆಗಳಿಂದೇಂ? ಈ ತೇರ್ಗಳಿಂದೇಂ? (ಎನೆ ಶಿಶುಪಾಲಂ ಜವನಿಕೆಯೊಳ್ ಕೇಳ್ದು ನಮ್ಮಪರಾಧಮಂ ಮನ್ನಿಸೆಂದು ಭೀಷ್ಮಕಂಗೆ ಕುಂಬಿಟ್ಟು) ಎಲೆ ವೀರಾಗ್ರಣಿಗಳಿರಾ! ಎಮ್ಮಕ್ಷೋಹಿಣೀಪತಿಗಳಂ ಕರೆಯಿಸಿಂ. ಎಮ್ಮ ಪಡೆವಳ್ಳರಂ ಕರೆಯಿಸಿ ಪಡೆಯುಂ ಸಜ್ಜುಗೊಳಿಸಿಂ, (ಎಂದು ಬೆಸಸಿ ಮೆಯ್ಜೋಷಂ ತೊಟ್ಟು ಪರದುರಾರೋಪಮಾದ ಚಾಪಮಂ ತೆಗೆನೆರೆದು ನಿಶಿತಮಾದಂಬುಗಳನೊಳಗೊಂಡಿರ್ಪ ಮೂಡಿಗೆಯುಮಂ ಕೈಗೊಂಡು ಆನೆ ಕುದುರೆ ತೇರ್ಕಾಲಾಳ್ಗಳೊಡೆಯರಂ ಕರೆದು) ಎಲೆ ತುಳಿಲಾಳ್ಗಳಿರಾ! ಮರೆಯೊಳಡಂಗಿರ್ಪೀ ವರವರ್ಣಿನೀಚೋರನಾದ ತುರುವಳ್ಳನಂ ಕಟ್ಟಿತನ್ನಿಂ (ಎಂದಾಣತಿಯಿತ್ತು ವಿಜಯ ಪಟಹ ಶಂಖ ಭೇರ್ಯಾದಿಗಳಂ ಮೊಳಗಿಸಿದಂ.)

ದಾರುಕಂ—(ಆಲಿಸಿ ಕೆಲನಂ ನಿಟ್ಟಿಸಿ)

ಶಾ|| ವಿ|| ಜಾರುತ್ತಿರ್ಪ ಹಯಂಗಳಾಖರ ಖುರಾಘಾತಂಗಳಿಂ ಧೂಳಿ
ತಾ | ನೋರಂತುಣ್ಮುತೆ ಕಣ್ಗಳಂ ಮುಸುಕೆ ಕಾಯ್ದುಂ ಖೇದಮುಂಪೊಂಪಿ
ನಿಂ || ತೋರಲ್ ತೇಸರ್ಗಳಗಾಳಯಿಂದೆ ಮಿಗೆಸುತ್ತಲ್ ಗೆಲ್ವಿನೊಳ್ಸಂಕೆ
ಯಾಂ | ತಾರೀತಂ ನುಡಿಯ್ಕೆ ಪೊಣರ್ಚಲಿದಿರಾಂಪಂ ಭೂಮಿಪಾಲಾ
ಗ್ರಣೀ || ೨೬ ||

ಕೃಷ್ಣಂ—ಇನ್ನಂ ಮರುವಸಲರೆಂಬ ಕೆಸರ್ವಲ್ಲಿಗೆಯ ಬನಮಂ ಸಮೂಲಲಮೆನೆ ಕಿಳ್ತು ಪಾಳ್ಗೆಯ್ವುದರೊಳ್ ಗಂಧ ಸಿಂಧುರ ನೆನಿಸಿದ ಜರಾಸಂಧನಲ್ತೆ.

ದಾರುಕಂ—ಕಂ ॥ ಬರೆಯಿಂದುಱರ್ಕೆಬಾಳಂ ।

ನೆರೆಮುನಿಸಿಂಕಱರ್ತೊೞ್ಪ್ಪಮಂ ಸಾಸಮೆನುತ್ತ ॥

ಬರಿಜಂತಳೆದಪ್ರೊಲೀತನ ।

ಪೊರೆಯೊಳಗೇಳ್ತರ್ಪನಾರಮಂ ಧರಣೀಶಾ ॥ ೩೭ ॥

ಕೃಷ್ಣಂ—ಇವನೆಮ್ಮ ಶತ್ರುಮುಖ್ಯನುಂ ಶಿಶುಪಾಲ ಕೃತಸಖ್ಯನುಮಾದ ಪೌಂಡ್ರಕಾಭಿಖ್ಯನಲ್ತೆ.

ದಾರುಕಂ—ಕಂ ॥ ಪುರ್ವಿನಗಂಟೆಂಬಾನಟ ।

ಗರ್ವದೆ ಪಣೆಯಲ್ಲಿ ಕುಣಿಯೆ ಭಟರಾರ್ಭಟೆಯುಂ ॥

ಪರ್ವಿರೆಬಾಳಂ ಜಳಪಿಸಿ ।

ಸರ್ವಗರ್ವಂ ಪೆಳರೊಡರ್ಚಿ ಬರ್ಪನಿದಾವಂ ॥ ೩೮ ॥

ಕೃಷ್ಣಂ—ಕಂ ॥ ಪುಲ್ಗಣೆಗೆಯ್ವುತೆ ಪಗೆದುರು ।

ಗಲ್ಗಳನಸಮಶಮೆನಿಪ್ಪ ಗರ್ವಮನಾಂತಂ ॥

ಬಲ್ಗಯ್ಯನೆಂಬಪೆಸರುರೆ ।

ಸಲ್ಗುಮಿವಂಗೀತನಲ್ತೆ ಸಾಲ್ವಾಭಿಖ್ಯಂ ॥ ೩೯ ॥

ದಾರುಕಂ—( ಪೊಂಪುೞಿವೋಗಿ )

ಕಂ ॥ ಪರಿಜೊಂದಿದ ಕಡೆಗಾಲಮೊ ।

ಮರುಮೊಯ್ದ್ದೞೆದರನೊದರ್ಪಮೈತಂದಪುದೋ ॥

ಬರುತಿರ್ಪುದೊ ಸಾಸಮೆಮ್ಮುಂ ।

ಬರಿಯುತೆನಾನರಿಯೆನಿವನದಾವನೊ ಪೇೞಾ ॥ ೪೦ ॥

ಕೃಷ್ಣಂ—ಕಂ ॥ ಚಂಡಭುಜದಂಡತೇಜಃ ।

ಖಂಡಾಯಿತಭಾನುಮಂಡಲಂ ಕಡುಗಾಯ್ಪಿಂ ॥

ಚಂಡಂಬರ್*ದಿಲಾಣ್ಮನೆನುರು ।

ಷಂಡನನೆಸಗಿರ್ಪ ಸಾಸಿ ಶಿಶುಪಾಲನಿವಂ ॥ ೪೧ ॥

ದಾರುಕಂ— ಎಲೆ ದೇವ! ನೋಡು ನೋಡು.

ಮ|| ಸ್ರ|| ಕಲುಷಂಗೆಯ್ಯುತ್ತೆ ದಿಕ್ಕಂ ಖಲರನಿರಿಯುತಂ ವೀರರಂ ಬಣ್ಣಿಸುತ್ತಂ | ಸಲೆಯುದ್ಧಂಗಟ್ಟಿ ತುತ್ಸಾಹಿಸುತೆ ಭಟರ ನಷ್ಟಾಂಗಳಂ ಪಾರಿಸುತ್ತಂ || ಮುಳಿಸಿಂದಂ ಸೇನೆಯುಂ ತಾಂ ತ್ವರೆಗೊಳಿಸುತೆ ಕೋದಂಡನಿರ್ಘೋಷದಿಂದಂ | ವಿಲಸತ್ತಾರಾಪಥಪ್ರಾಂತಮನೊಡೆಯಿಸುತಂ ಪೌರುಷೋತ್ಪರ್ಷನೀತಂ || || ೪೨ ||

( ಬಳಿಯುಂ ಪಲಂಬರ್ ಭೂಪಾಲರ್ ಬೆರಸು ಶಿಶುಪಾಲಂ ಯುದ್ಧರಂಗಮಂ ಪೊಕ್ಕು )

ಶಿಶುಪಾಲಂ— ಶಾ|| ವಿ|| ದುಷ್ಟಾಭೀರವರಾಕ! ನಿಲ್ಲಳಂದಿರ್ ಬಂದೆಂ ಸಮಂತಳ್ಕು ನೀಂ | ನಷ್ಟಾಶಾಧಿಪರಂಕರಂ ಶರಣರಂ ಪೊಂದುತ್ತಡಂಗಿರ್ದೊಡಂ || ಕಷ್ಟಂ ನೀನುಳಿಯಲ್ಕುದಿಯು ನಯನಕ್ಕಿಂಬಾದ ದೈವಾಜ್ಞೆಯಿಂ | ಧೃಷ್ಟಂ ನೀಂ ಗಡ ಗೋಪಬಾಲ ಸದೆಗುಂ ನಿನ್ನಂ ಮದೀಯಂಪರಂ || || ೪೩ ||

ದಾರುಕಂ—( ಮುನಿದು )

ಮ|| ವಿ|| ಅರರೇ ಬಲ್ಲೆಯ ಚೈದ್ಯ! ಕಂಸನೆನಿತಾರ್ಪಂಶೌರಿಯೊಳ್ತೋರುತಂ | ಮರಣಂಬೊಂದಿದ ನಾಗಳಾಕುವಲಯಾಪೀಡೇಭಮುಂ ಸತ್ತುದೇ || ಪೊರೆವೆಂ ರೇಣುಕಣಕ್ಕಮುಂ ತಳೆದನಾ ಚಾಣೂರನುಂ ಯುದ್ಧದೊಳ್ | ಸರಿಯೇಂ ನೀನವರಂತೆ ವೇಳ್ಪುದೆಲೆಲೇ! ಪ್ರಾಣಂಗಳಂ ನೀಗದಿರ್ || || ೪೪ ||

ಕೃಷ್ಣಂ—( ನಗುತೆ )

ಕಂ|| ಶಿಶುಪಾಲ! ಬಂದುದೇಗಳ್? |
ಕುಶಲಮೆ? ಮುಳಿಸೇಕೆ ಪೇಳ ನಿನಗುಮೆಯುಮುಮಂ ||
ಭೃಶದಿಂದೆ ಪೊಂದಿಸಲ್ಕಾಂ |
ಪ್ರಶಮನಮಂಗೆಯ್ವೆನೊಲ್ದು ವಿಘ್ನವಿಸರಮಂ || ೪೫ ||

ಶಿಶು.ಪಾಲಂ—(ಕಾಮುಧ್ವ)

ಕಂ॥ ಪಲಕಾಲದಿಂದೆ ಪಲ್ಲೀ ।
ಲಲನಾಚಾತುರ್ಯಚೌರ್ಯವಂಚಿತನಾಗು ॥
ತ್ತಿಳೆಯಮಾಣ್ಮನಕನ್ನಿಕೆಯುಂ ।
ಪಲ! ನೀಂಕಳ್ದುಯ್ದುಸಾಯುಲೆಳಸಿದೆಯೀಗಳ್ ॥೪೬॥

ದಾರುಕಂ—ಕಂ॥ ತಳಿವೊಲ್ ಭೂಧರಮಾಸನ ।
ಬೆಳಗುವತರ್ಜನಿಯು! ಕೊನೆಯೊಳೊಪ್ಪಿರ್ದುದೊ ಮಾ ॥
ಗಳಪುವೆಯಾತನಮುಂಗಡೆ ।
ಯೊಳೆ ನಾಣ್ಚದೆವೊಗಮನೆತ್ತಿಕೊಂಡೆಲೆಚೈದ್ಯಾ ॥ ೪೭ ॥

ಕೃಷ್ಣ—ಪಲಮಾತುಗಳಿಂದೇಂಫಲಂ ?

ಕಂ॥ ಪುರುಹೂತನು ಮಸುರರು ಮಾ ।
ಸುರರುಂಪ್ರದ್ಯುಹುಮುಂಜರಸ್ಥಯುನಿವಳಂ ॥
ತರುಣೀಮಣಿರುಕ್ಮಿಣಿಯುಂ ।
ಕರೆದುಯ್ದೆಲ್ಕಾರರೆಂಬುದಂ ತಿಳಿಚೈದ್ಯಾ ॥ ೪೮ ॥

ಶಿಶುಪಾಲಂ—ಎಲೆಜಾರಶೂರ! ಚೌರ್ಯಧುರಂಧರ!! ಕಾಲುರಿಚ!!!

ಕಂ॥ ಬರಿದೇಕೆಲೆ ಗಳಪುವೆಪೂ ।
ಸರಲನಮೊನೆಯುಲ್ಲಿಮೆಯ್ನೆವಿರ್ ಮೂಡುತಿರಲ್ ॥
ಹರಿಸದೆ ಪೌರುಷಮುಂ ನೀಂ ।
ಮೆರೆಯಿಸಿಬಾಳಿಸಿದೆ ಭೀರುನಿವಹಮುನಹಹಾ ॥ ೪೯ ॥

ಈಗಳ್ಸೆ ;

ಮ॥ ವಿ॥ ಬಲದೊಳ್ ಚಾಪದಿನೆಚ್ಚ ಬಾಣತತಿಯಿಂ ಕ್ಷುಬ್ಧಂಗ ಳಾದಾದ್ವಿಪಂ । ಗಳಕನ್ನೀರ್ವೊನಳಿಂದೆ ದೀರ್ಣಮುನಮುಕ್ಸ್ಥಂ ದಿಗ್ಗಜ ಶ್ರೇಣಿಗಳ್ । ಉಳನಿನ್ನೀಮುದಮುಂ ಸಮಂತು ಪೊರೆ ನಿನ್ನಂರಾದ್ರಮೀ

ಕಾಳಗಂ | ಪಲಲಕ್ಕಾಟಿಸಿ ಬರ್ಪ ಭೂತತತಿ ಬೇತಾಳೌಘದಿಂದಾವೃತಂ॥೫೦

ದಾರುಕಂ—ಆಃ! ಇವನುಬ್ಬಟೆಯೆಂತುಟೊ ನೋಳ್ಪಂ. (ಎಂದು ಪ್ರಕಾಶಂ)

ಎಲೆ ಶಿಶುಪಾಲ! ಈ ಕೃಷ್ಣಂ ತನ್ನೆಳವೆಯೊಳ್ಗೆಸೆ?

ಮ॥ ಸ್ರ॥ ಪುಡಿಗೆಯ್ದಂ ಕೇಳ್ದಿಷ್ಟಾಪ್ಯನನುರುಶಕಟಾಭಿಖ್ಯನಂ ಜರ್ಝರಂಗೆ | ಯ್ದುಡಿಕಾಯ್ಪಿಂದಂ ತೃಣಾವರ್ತನ ನೆಣಸಿದನಾಪುಲ್ಲೆಪ್ಪಲೇವೇಳ್ದಪೆಂನಾ॥ ಕಡುಸಾಸಂದೋರಿವನ್ಯದ್ವಿಪಸಮರನಿಪಾ ಯಾತುಧಾನರ್ಕಳಂತಾಂ| ಕಡಿದಂ ನಿನ್ನನ್ನರಂ ನಿನ್ನಯ ಕೊಡಕೆಯೊಳಾವಾತು ಮೆಯ್ದ್ಲೋರದಾಯ್ತೇಂ ॥ ೫೧ ॥

ಕೃಷ್ಣಂ—ಕಂ॥ ತುರುವಳನಾಗಿರ್ದೊಡುಮಾಂ |
ಧರಣಿಪನಾಗಿರ್ದೊಡುಂ ನಿನಗೀಗಳ್ ॥
ಅರನಾಗಿರ್ದಪೆ ನೇಕೆ? |
ದುರಾಶೆ ಮಾಣ್ ಬಂದ ಮಾರ್ಗದಿಂದಮೆ ಪೋಗಾ ॥ ೫೨ ॥

ಶಿಶುಪಾಲಂ—ಎಲೆ ನಂದನಂದನಾ! ತುರುಗಳ ನೋವಲ್ಕೆ ಪಿಡಿದಿರ್ದ ದಂಡಮನೀಗಳದೆಲ್ಲಿಬಿಸುಟು ಬಾಹುಜನಂತಿರೆ ತೋಳ್ವಲಮಂ ತೋರಲ್ಕೆ ತಂದಿರ್ಪೆ? ನಿನ್ನತ್ಯದ್ಭುತಮಾದ ವಿಕ್ರಮಮನರಿಯದರಿರ್ಕುಮೇಂ? ಎಲೆ ನಾಣಿಲಿ! ಆಲಿಸು.

ಕಂ॥ ಮುನ್ನಂ ಪದಿನೆಂಟುಂಸೂಳ್ |
ನಿನ್ನಯ ಭುಜವೀರ್ಯದಿರವನೀಕ್ಷಿಸಿದಾತಾ ॥
ಯೋನ್ನತವಿಪುಲಸ್ಕಂಧಂ |
ಕೆನ್ನಂ ತಾಂ ಸಕ್ಕಿಗಡಜರಾಸಂಧಾಖ್ಯಂ ॥ ೫೩ ॥

ದಾರುಕಂ—ಇವಂ ತನ್ನ ಪನ್ನತಿಕೆಯಂ ವ್ಯಾವರ್ಣಿಸಿ ಸಮರ್ಥಿಸುತಿರ್ಪಂ.

"ಬೊಗಳ್ವ ತುಡುಗಣಿ ಕಚ್ಚುವುದಿಲ್ಲಂ" ಎಂಬುದನಾರರಿಯರ್!

ಶಿಶುಪಾಲಂ—ಈಗಳುಭಯತೇಜಸ್ತೋಲನತುಲಾದಂಡವೆನಿಸಿದ ಯುದ್ಧದೊಳೆಲ್ಲಮುಂ ವಿಶದಮಕ್ಕುಂ.

ಕೃಷ್ಣಂ—ಕಂ॥ ಎಳವೆಯೊಳೆನ್ನ ಮಯ್ತೋಳ್ಗಳ್ |
ತಳೆದಿರ್ಕುಂ ಬಿಲ್ಲನೆಲೆಲೆ ನಿಮಗೂರೆಕೂರಂ ||
ಗಳನಿಪ್ಪವು ಯಮಸದೃಶಂ |
ಪೆಳರಿಂಪೆಂಗೊಟ್ಟು ಪೋರದಿರಿ ಮರಿ ನೃಪರಾ ! || ೫೪ ||

ಶಿಶುಪಾಲಂ—ಫಡಫಡ. ಪಡೆಯ ನೊಡಂಗೊಂಡಿದಾವ ನೆಮ್ಮ ಬಲದೊಳ್ ಪ್ರೆಣರಲ್ ಕ್ಕೈವೀಸುವಂ ?

ದಾರುಕಂ—(ಕೃಷ್ಣನತ್ತಲಿರ್ದಾಗಿ) ಎಲೆ ಕುಮಾರ ! ಸಬೇನಾದ ಬಲರಾಮಂ ಪಗೆಯ ಸೈನ್ಯಮಂ ಪೊಕ್ಕಿರ್ಕುಂ. ಈಗಳಾದೊಡೆ ;

ಶಾ॥ ವಿ॥ ಕ್ರೇಂಕಾರಂ ರಥಚಕ್ರಸಂಚಲನದಿಂ ಮೂಡುತ್ತಿರಲ್ ಭೇರಿಯಿಂ | ಭಾಂಕಾರಂ ಪರೆಯುತ್ತಿರಲ್ ಪಟಹನಿಸ್ಸಾಣಸ್ವನಂ ಪುಟ್ಟಿರಲ್ || ಘೂಂಕಾರಂ ಚಲದಂತಘರ್ಘರದೆ ಪೊಣ್ಮಲ್ ಚಾಪದಂಡೋತ್ಥಿತಂ ಟಂಕಾರಂ ಮೊರೆಯಲ್ ಸಮಂತು ಕಿವುಡಾಯ್ತೀಲೋಕಮೇಂ ಶಬ್ದಮೋ ||

ಕೃಷ್ಣಂ—(ಸಂಭ್ರಮದಿಂ ಕೋಯುದಂಡಮಂ ತೆಗೆನೆರೆದು)

ಮ॥ ವಿ॥ ಮಿಸುಪುದ್ಯದ್ಭುಜದಂಡದಿಂ ಸೆಳೆದುತಿರ್ಪಂ ವೈರಿಸಂದೋಹದ | ಲ್ಲಿಸುತಂ ಶಸ್ತ್ರಗಳಟ್ಟಿಗಳ್ ರಣದೆ ಬೀಳ್ವುತ್ತಿರಲ್ಮೊಕ್ಕಳಂ || ರಸೆಯಂ ಮುಚ್ಚುವೆ ನಿಂದುನಾಂ ಸುರಪನುಂ ಸಿದ್ಧರ್ಕಳುಂ ಸಾಧ್ಯರುಂ| ಬಿಸಮಂದಂಬಡೆದಾ ಮರುತ್ತುಗಳು ಮೆಲ್ಲರ್ ನೋಡುಗೀಚೋದ್ಯಮಂ||೫೬||

ದಾರುಕಂ—(ಅಚ್ಚರಿಗೊಂಡು)

ಚಂ॥ ಮಾ॥ ಜಗಜಗಿಪಾ ಸುವರ್ಣಮಯಕೇತನದೀಪ್ತಿ ಯದುಣ್ಮಲೆತ್ತಲುಂ | ಸೆರ್ಗಯಿಪ ಘಂಟೆಯಾ ಘಣಘಣಾರವದೇಳ್ಗೆಯುಮುಂದ ಮೊಂದಿರಲ್ || ಮುಗಮುಗಿಸುತ್ತ ಮಿರ್ಪ ಸುರನಂದನಪುಷ್ಪವಿತಾನಗುಚ್ಛದಿಂ | ಬಗೆಗೊಳುತುಂ ವಿಮಾನನಿಕುರಂಬ ಮಿದೀದಿವದರಲ್ಲಿಗಂಜಿಕುಂ || ೫೭ ||

ಕೃಷ್ಣಂ—ಎಲೆದಾರುಕ! ಕುದುರೆಗಳಂ ಬೇಗದಿಂ ನಡೆಯಿಸು ನಡೆಯಿಸು.

(ಎಂದು ತೆರಳ್ದಂ.)

(ಬಳಿಕ್ಕ ವಾಗಸವಟ್ಟೆಗರಗಡಣವನೆಸಪುವಿರ್ಪ ಬಿಜ್ಜೋದರರ ಜುಗುವಂ ಸಾರ್ತಂದುದು)

ವಿದ್ಯಾಧರಂ—ಪ್ರಿಯೇ! ನೋಡು ನೋಡು. ಈ ರಣರಂಗದೊಳೈಸೆ ; ಜಸಮಂ ತಳೆದೆಸೆವಶ್ವಾರೋಹಕರುಂ, ಪರಬಲಮಂ ನಿರಿವುದರೊಳ್ ದೊರೆವಡೆದ ರಥಿಕರುಂ, ರಣವಿಪತ್ತುಗಳಂ ಪುಲ್ಗೆ ಪಾಸಟಿಗೆಯ್ವ ಕಾಲಾಳ್ಗಳುಂ, ಮಾರ್ಬಲಮಂ ಸಿಡಿಮಿಡಿವಡೆಯಿಪ ತುಳಿಲಾಳ್ಗಳುಂ, ಪರಸ್ಪರಯುದ್ಧೋದ್ಯುಕ್ತರಾಗಿ, ನೋಟದಿಂದಮೆ ಪೆಳರನೊದವಿಪ ಪ್ರಾಸಂಗಳಿಂದೆಯುಂ, ಮರುವಸಲರ ಸೇಣಿಯನೊಕ್ಕಲಿಕ್ಕಲಾರ್ತಚಕ್ರಂಗಳಿಂದೆಯುಂ, ಅತಿನಿಶಿತಮುಖಂಗಳಾದ ಶಿಲೀಮುಖಂಗಳಿಂದೆಯುಂ, ದೆಸೆದೆಸೆಗಳೊಳಂ ಬೆಳಬೆಳಗುವ ಖಡ್ಗಂಗಳಿಂದೆಯುಂ, ಪಗೆಯ ಮದಮನಡಂಗಿಪ ಗದೆಗಳಿಂದೆಯುಂ, ವೈರಿಕಂಬುಕಂಠಮಂ ಕಾತಳ್ಗೊಳಿಪ ಮುಸಂಠಿಗಳಿಂದೆಯುಂ, ಮತ್ತಮಿತರ ಶಸ್ತ್ರಾಸ್ತ್ರಂಗಳಿಂದೆಯುಂ ಮಿಕ್ಕುತೆ ತಮ್ಮಂ ಪೆರರಿರಿಯುತ್ತಿರೆಯುಂ ನಗುತೆ ಪುಲಕಿತರಾಗಿ ವಿಜಯಮನೆಳಸಿ ಬೆಮರ್ವನಿನಸುನಸು ನೊಸಲೊಳೊಸರುತಿರೆ ಪುರ್ವುಗಂಟಿಂ ಭಯಂಕರಂಗಳಾದಾಲಿಗಳಂ ತಾಳುತೆ. ಶಿಕ್ಷಾವಿಶೇಷದರ್ಶಿತ ವಿವಿಧಸಮರಕ್ರಮರಾದನಿಮಿತ್ತಮಾಣಮುಂಸೇದೆವಡೆಯದೆ ತಂತಮ್ಮ ಸಾಸಮಂ ತೋರುತಿರ್ಪರ್.

ವಿದ್ಯಾಧರಿ—(ನಿಟ್ಟುಸಿ) ಎಲೆ ಕಾಂತ! ಈ ವಾರಣಂಗಳೈಸೆ; ಮಂಗಡೆಯೊಳಿರ್ಪ ಸಿಂಧುರಂಗಳ ಪೃಷ್ಠದೊಳ್ ಬಿಳ್ದು ನೇಲ್ವ ಪಳವಿಗೆಗಳ ದುಗುಲಂಗಳಂ ಮಹಾಪರ್ವತಂಗಳ್ ಬರ್ದಿಲಾಣ್ಮನೊಳ್ ಸಂಧಿಗೆಯ್ದು ತಮ್ಮ ತಮ್ಮ ಪತಾಕೆಗಳ ನೇರಿಸಿ ನಿಜಸೇಮೆಗಳಂ ವಿಭಾ

ಗಿಸಿಕೊಳಲನ್ಯೋನ್ಯವಾಗಿ ಕಾದುವಂತೆ ತೋರುಗುಂ. ಈ ಗಂಧರ್ವರಾಜರುಂ ಬವರಮನೀಕ್ಷಿಸಲಾಟಿಸಿ ವಿಮಾಂಬಟ್ಟೆಯೊಳ್ ಬಂದು ನಿಂದಿರ್ದ ಗಂಧರ್ವರಂ ಕಂಡು ನಿಜನಾಮತಾಸಹನತೆಯಿಂದವರೊಳ್ಕಾದಲ್ಕೆಂದು ಮೇಗೆ ನೋಡುತೆ ಮುಂಗಾಲ್ಗಳ ನೆತ್ತಿಕೊಂಡು ನೆಗೆವಂತಿರ್ಕುಂ. ಈ ತೇರ್ಗಳುಂ ವೇಗದಿಂದಸುಂಬುವ ಪತಾಕೆಗಳ ಪಟಂಗಳುಂ ಸಮ್ಮರ್ದ ಸಂಭೂತಮಾದ ಬೆಮರ್ವನಿಯು ನಾರಿಸಲ್ ಬೀಸುವಂತೆ ತೋರುಗುಂ. ಮತ್ತಮಿದೆಕೊಳ್.

ಮ|| ವಿ|| ಕರವಾಳಾಹತಿಯಿಂದೆ ಸಿಂಧುರಶಿರಂಗಳ್ ಸೀಳ್ದು ಮುಕ್ತಾಫಲಂ | ಧರೆಯೊಳ್ ಚೆಲ್ಲಿರಲಪ್ಸರೋಗಣ ಮುದಂ ತಾವಾಶಿಸುತ್ತಿರ್ಕುಮಾ|| ದರದಿಂದಂ ಭಟರಾಪ್ರಕೋಷ್ಠದೊಳಗಾಂ ತಾಂತ್ರಂಗಳಂ ಸೋರ್ವನೆ | ತ್ತರಿನಾದಂಕೆಸರಾದ ಸ್ವೇದಪದದಿಂದಂ ಭೀತಿಯುಂ ಸಾರ್ಚುವರ್||೬೮||

ವಿದ್ಯಾಧರಂ—ಎಲೆ ಕಾಂತೆ! ಇತ್ತಲೀಕ್ಷಿಸ.

ಕಂ|| ವಾಹಾರೋಹಂ ಬಾಹುಗ |
ಳಾಹೋಪುರುಷಿಕೆಯನ್ನೆದೆ ತೋರುತೆಮುಧಟಾ ||
ದೇಹಮನೆಣಿಸುತೆ ಪುಲ್ವೋ |
ಲಾಹಾಗಂಧರ್ವವಿಸರದಿಂಸ್ತುತನಾದಂ || ೬೯ ||

ವಿದ್ಯಾಧರಿ—ಇತ್ತಲೀಭಟರ್ಸೆ ;

ಕಂ|| ಮುಳಿಯುತೆ ಕರ್ಚಿದ ತುಟಿಯಿಂ |
ತಳದಲ್ಲೆಸೆದಿರ್ದ ಬಾಳ್ಗಳಿಂ ಕ್ಷತಗಾತ್ರಂ ||
ಗಳನೊಸರ್ವ ನೆತ್ತರಿಂದಾ |
ಗಳೆಪ್ರತಾಪಮು ಳ್ಳನುತ್ತುಗಂಬೊಲ್ ತೋರ್ಪರ್ || ೭೦||

ಮತ್ತಂ,—

ಚಂ॥ ವೃ॥ ಕರಿಗಳ ಗಂಡಮಂ ಕಡಿಗಿ ಸೀಳುತೆ ಪೊಂಪುಳಿವೋಗಿ ಬೀಗುತುಂ । ನೆರೆ ತುವುಲಸ್ವನಂಗಳ ನೊಡರ್ಚುತು ವಿಾತುಳಿಲಾಳ್ಗಳೊಲ್ಮೆಯಿಂ ॥ ಗುರುಕುಚದಿಂ ತೆರ ಬೊಳೆವ ಸಗ್ಗಿಗವೆಣ್ಗಳೊಳಳ್ತವಟ್ಟಸಂ । ಗರದೊಳಿಕಾಡಿಕಾದಿ ಮಡಿದರ್ ಬಿಸವಂದಮಿದಲ್ತೆ ವಲ್ಲಭಾ ॥ ೬೧ ॥

ವಿದ್ಯಾಧರಂ—

ಚಂ॥ ವೃ॥ ಅಗಿನಿಗೆ ಸಾಟಿಯೆಂದೆನಿಪ ಬಾಣದಿ ನಾಮಿದುಳುಣ್ಮಿ ಸೋರ್ದೊಡಂ । ರಗುತದ ಪೂರವೊಣ್ದೆಸೆಗಳಲ್ಲಿ ಝಳಝ್ಝಳಶಬ್ದವೊಡರ್ಚುತಿರ್ದೊಡುಂ ॥ ನಗುತ ಮಳಂಬ ವೆಂದೆನೆ ಮಹಾರಥಿಕರ್ ಮುನಿದಿರ್ದು ವಿಾಗಳಾ । ಯ್ಕಗೆ ರಿಪುವರ್ಗಮಂ ಸದೆವರಲ್ತೆ ಸರೋಜದಳಾಯತೇಕ್ಷಣೇ ॥ ೬೨ ॥

ವಿದ್ಯಾಧರಿ.—ಈ ದೈತ್ಯಕುಲ ಕಾಲಮೃತ್ಯುವಾದ ತಾವರೆಗಣ್ಣ ನಿನಿಸುಮು ನಿಜಂತೆ ತೋರ್ಪುದು. ಎಲೆ ಕಾಂತೆ! ಈ ಅಚ್ಚರಿಯಂ ನೋಡು ನೋಡು. ಶಾರ್ಙದಿನೆಚ್ಚ ಶಾತಮುಖಂಗಳಾದ ಶಿಲೀಮುಖಂಗಳ್ ಮಾನಿಸರ ತಲೆಯು ನಿರಿಯಲ್ ಆ ಕಡುಕುಗಳ್ಗೆ ಕುದುರೆಗಳ ತಲೆಗಳ್ಮೇಳಸೆ ಪಾರುತಿರ್ಪ ಅಟ್ಟೆಗಳ್ ಗಂಧರ್ವರಂ ತೊಪ್ಪುಗುಂ. ಅತ್ತಲ್ಕುದುರೆಗಳಟ್ಟೆಗಳ್ಗೆ ಮಾನಿಸರ ತಲೆಗಳ್ಪಳಂಚಿರೆ ಪಾರುತೆ ಕಿನ್ನರರಂತೆ ಸೊಗಯಿಕುಂ. ಇತ್ತಲೀ ಮಾನಿಸರ ಕಬಂಧಂಗಳ್ಗೆ ಗರ್ದಭ ಕರಭ ವೃಷಭ ಮುಖಂಗಳ್ಪಳಸಿರಲ್ಪಾರುತಮಿರ್ಪುಂ ರಕ್ಕಸರಂತೆ ಬಿಸವಂದಮನುಣ್ಮಿಸುತಿರ್ಕುಂ ಇತ್ತಲ್ಬೈಸೆ; ಸೀಳ್ದೊಡಲತ್ತಣಿಂ ಪರಿವ ಕೆನ್ನೀರ್ತೊರ್ನಲೊ ಳಾನೆಗಳಟ್ಟೆಗಳೋಲಾಡುತೆ ಪೆರ್ಗಲ್ಗಳಂತೆಯುಂ, ಬೆಳ್ಗೊಡೆಗಳರಲ್ದ ಕೆಸರ್ಮಲ್ಲಿಗೆಗಳಂತೆಯುಂ, ಪರ್ಯಸ್ತಮಾದನೆವಿರ್ಗಳ್ ಪಾವಸೆಯುಂತೆಯುಂ, ಕೃಪಾಣಂಗಳ್ಪಾವುಗಳಂತೆಯುಂ, ಕುಚಾಗಳಂಚೆಗಂಳತೆಯುಂ, ಪರಿಗೆಗಳ್ಕಮಠಂಗಳಂತೆಯುಂ, ಧವಳತರ ಪಟಗೃಹಂಗಳ್ ಚಿತ್ತುಳಂಗ

ಳಂತೆಯುಂ, ಬೞ್ಕುವಿ ಕೂರ್ನ್ಱಿಯ ಪರ್ದು ಕಾಗೆಗಳ್ ಬಿಕ್ಕನುಂಡು ಕಳಿದೆಲ್ವುಗಳ್ ಬಕಂಗಳಂತೆಯುಂ ತೋರುತ್ತಿರ್ಪುವು.

(ಬೇರೊಂದೆಡೆಯಂ ನೋಡಿ,)

ಮ॥ ಸ್ರ॥ ಇದೊ ದಂಷ್ಟ್ರಾದಂಡದಲ್ಲಿರ್ಪ ಡಗ ನೆಳಸುತಂ ಕಾಗೆಗಳ್ ಬಂದು ಪೊರ್ದಲ್ । ಪವಪಿಂದಂ ಮುಚ್ಚ್ರನೆಂಬಂತಿರೆ ವ್ರೊಲವುಗಳಂ ಸೋವುತುಂ ನೆತ್ತರಂ ಚಂ॥ ದದೆತ್ತಂ ಬುತ್ತಾನೆಯಾಕರ್ಪರದೆ ಕುಡಿದದಂ ಡಾಕಿನೀಚಕ್ರವಾಳಂ । ಮುದದಿಂ ಕೆಂಪಾಗೆ ಕಣ್ಗಳ್ ನಲಿಯುತೆ ಕುಣಿಗುಂ ನೋಡಿದಂ ಜೀವಿತೇಶಾ ॥ ೬೩ ॥

ಮತ್ತಂ;

ಕಂ॥ ಒಸೆಯಿಂ ನನೆಯಿಸಿ ಭಟರಾ ।
ಮಿಸವುಂ ಸವಿಯುತ್ತೆ ಪಿಶಾಚಕಾಂತೆಯರಿದೊ ಸಂ ॥
ತಸದಿಂ ನಚ್ಚಣಮುಂತಾ ।
ಮೊಸಗುತೆ ಪುರ್ಗಂಕಡಂಗಿ ಕುಣಿಯಿಪರಿತ್ತಲ್ ॥ ೬೪ ॥

(ಎರಡುಪಿಂದಿರುಗಿ ಬಿಕ್ಕಸಂಗೊಂಡು.)

ಕಂ॥ ಪಸಿದ ತರಕ್ಷುವದೊಂದೋ ।
ಡಿಸುತಂ ಜಂಬುಕಮನಾಗಳಚ್ಚಸರಲ್ಗಳ್ ॥
ಮುಸುಕಿದ ಬಿಕ್ಕಿನಕಂಡಮು ।
ನಸುವಸದಿಂ ನೊಣೆದು ಮಡಿದುವಿದೆಕೊಳ್ ಕಾಂತಾ ॥ ೬೫ ॥

ವಿದ್ಯಾಧರಂ.— ಆ! ಈ ಕಂಸಾರಿಯ ಕೈಚಳಕಮು ನಾನೇವಣ್ಣಿಪೆಂ ।

ಮ॥ ಸ್ರ॥ ಮುಳಿಸಿಂ ಕೆಂಪಾಗೆ ಕಣ್ಗಳ್ ತೆಗೆನೆರೆಯುತೆ ಕೋಯಂಡಮಂ ನಾಡೆತೇರೊಳ್ । ತೊಳಪಂ ಕಂಸಾರಿತಾಂ ಚಿತ್ರಿಸಿದ ತೆರದೆ ಕುಳ್ದರ್ವೀರಾಸನಸ್ಥಂ ॥ ಆಳವೇನಾನೀತನೀ ಕೈಚಳಕಮನರಿಯಲ್ ಬಾಣ ಸಂಧಾನಮೋಕ್ಷಂ । ಗಳೊಳಂ ತಾಗಿರ್ದೊಡುಂ ತದ್ರಿಪುನಿವಹದೊಳಚ್ಚಂಬದೋರೊಂದೆ ಕಾಣ್ಗುಂ ॥ ೬೬ ॥

(ಮತ್ತಂ ನಗುತೆ)

ಕಂ॥ ಬಾಗಿರೆ ಶಾರ್ಙ್ಗಂ ರಿಪುಗಳ್ |
ಬಾಗುವರದು ಮುಕ್ತಜೀವಮೆನಿಸಿದೊಡವರುಂ ॥
ಬೀಗುತೆತದ್ವಿದ್ಯೆಯುನೊ |
ಲ್ದಾಗಳ್ ಕೈಗೊಂಡು ಮುಕ್ತಜೀವರೆನಿಕ್ಕುಂ ॥ ೬೩ ॥

ವಿದ್ಯಾಧರಿ—ಎಲೆ ಕಾಂತ! ಅಚ್ಚರಿ ಅಚ್ಚರಿ! ಸಿರಿಯುರಸಂ ದೆಸೆದೆಸೆಗಳೊಳಸುತಿರ್ಪೀಸರಲ್ಗಳ್ ಕೆಲಂಬರ ಕುದುರೆಗಳ ನಿರಿದು ಸಾರಥಿಗಳಂ ತರಿದು ಕೋದಂಡಂಗಳಂ ಮುರಿದು ಶಸ್ತ್ರಾಸ್ತ್ರಂಗಳನರಿಯುತಿರಲವರ್ ತೇರ್ಗಳತ್ತಣಿನಿಳಿದು ಆರಡಿಗಳೆಚ್ಚಪುಣಂಬುಗಳೊಡಲೊಳ್ತ್ತಿರೆ ಬೆಮರ್ತರ್ ನಿಟ್ಟುಸಿರಿಕ್ಕುತೆ ಪೆಳರ್ಕೆಯಿಂದಡಿಗಡಿಗುಂ ಜಾರುತೆ ನೆಲನೊಳ್ಬಿರ್ದಟ್ಟೊಳಿಯುವುಂ ನಿರುಕಿಸದೆ ಸರಲ್ಗಳ್ಪಾಯ್ತರ್ಪ ಮಾರ್ಗಮನೆ ನಿಟ್ಟಿಸುತೆ ದುರ್ಗಂಗಳೊಳಿರ್ಪಬಳ್ಳಿಮನೆಗಳೊಳಡಗಿರಲ್ಕೆಂದು ಪಾರಿಪೋಗುತಿರ್ಪರ್. ಕೆಲಂಬರಸುಗಳ್ಪ್ರಾಣನೊತ್ತಿಬರುತ್ತಿರೆ ಯುದ್ಧರಂಗದೊಳಲ್ಲಲ್ಲಿ ರಾಶಿಗಳಾಗಿ ಬಿಳ್ದಿರ್ಪ ಬಾಣಂಗಳ ಮಧ್ಯದೆ ಮಲಗಿರ್ದ ಮಹಾವೀರರ್ಕಳ್ ತಮ್ಮಸುವರಂ ನೀಗಲ್ಕೆಂದು ಶಾಸ್ತ್ರೋಕ್ತಮಾದ ಶರಶಯ್ಯೆಯೊಳ್ ಪಟ್ಟಿರ್ಪಂತೆ ಮೆರೆವರ್. ಮತ್ತೆ ಕೆಲಂಬರಂಬುಗಳೊಡಲೊಳ್ನಾಟಿರಲವು ಕೀಳುತೆ ಕಣ್ಣೀರ್ಗರೆದತಿಮಸ್ಸಹಮಾದುಬ್ಬೆಗಮಂ ತಾಳ್ದು ಪೊರಳುತಿರ್ಪರ್. ಇಂಕೆಲರ್ ಬಿಲ್ಲಮಧ್ಯಮಂ ಪಿಡಿದು ತಮ್ಮ ದಕ್ಷಿಣಭುಜಶಿರದೊಳ್ ತಳಮನಿಟ್ಟು ಸ್ತಬ್ಧರಾಗಿ ಡೊಣೆಯಿಂದಂಬುಗಳನೆಳೆವಂತೆ ತೋರ್ಪರ್.

ವಿದ್ಯಾಧರಂ—ಚಂ॥ ಮಾ॥ ಧರಣಿಪರೊಳ್ದು ತಳ್ಕೆಯೊಸಗುತ್ತಿರೆ ತಾಮತಿರಕ್ತರಾಗುತಂ | ಧರೆಯುಪರಾಗೆ ಯಾದಳದನೇಮ್ರೊರೆವೆಂ ನಲವಿಂದ

ಮಹಾಸ್ರ॥ ತೆರಳಿಸುರಾಲಯುಕ್ಕಿವಳು ಮೊಲ್ಮೆಯಿನಾಂತು ರಜೋ
ಪದೇಶಮಂ । ತೆರಳ್ದ*ವಳಲ್ತೆ ಪಿಂಗಡೆಯೊಳಾಹ! ಇದೇಂಬಿಸವಂದ
ಮೋಽಪ್ರಿಯೇ ! ॥ ೬೮ ॥

ವಿದ್ಯಾಧರ.—ಎಲೆ ಕಾಂತ!

ಚಂ॥ ಮಾ॥ ತೊಡೆಯೊಳಗೊಪ್ಪಿದಂಗನೆಯ ಪೆರ್ಮೊಲೆಯೊಳ್ತೊಡೆ
ದಿರ್ದ ಕುಂಕುಮಂ । ನಿಡಿದೆಸಿಸಿಪುರ್ರಕ್ಕ ಕುಡೆರಾಗಮುನೀ ಪೊಸಸಗ್ಗರಂ
ಸೊಗಂ ॥ ಬಡೆಯುತೆ ಚೆಲ್ವಿವೆತ್ತನಡೆವಾಡದೆ ಕುಳ್ಳಿರುತ್ತ್ಯದೆತನ್ನಯಾ ।
ಕಡುಕನಭೀಕ್ಷಿಪಂಕಡಗಿ ಪೊಂಪುಳಿಪೊಂಗುತಲಂಪಿನಿಂ ಪ್ರಿಯಾ ॥ ೬೯ ॥

ಮತ್ತಮಿತ್ತಲ್ ನಿರುಕಿಸ.

ಕಂ॥ ಬದವಿರೆಸಂಗರಮನುವಿಂ ।
ಪವಿಮೂರ್ಪದಿನಾಲ್ವರಬಲೆಯ-ಕರ್ಗಳ್ಮ್ರದಲೊಳ್ ॥
ಪದುಳದೆನರಯಿಸೆಭಟರಂ ।
ಕದುಬುತೆ ಕಲಹಂಗೆಯುತ್ತಮಿರ್ದರ್ತರ್ಮೆಳ್ಳೊಳ್ ॥ ೭೦ ॥

ಕಂ ॥ ಮೆರೆಯಿಸಲೊರ್ವಳನೀಗಳ್ ।
ಪುರುಷರ್ಪದಿನರುಮರಸುಮರಾಸಂ ಪೊಣ್ಮೆ ॥
ತ್ತಿರಲಿರ್ಪಡಿಸಿದ ದೋರ್ವ್ವಲ ।
ಮುರಿಮೊರೆಯುಲ್ ಸಾಸದಿಂದೆ ಕಾದುವರಿದೆಕೊಳ್ ॥ ೬೧ ॥

ಮತ್ತಂ—ಕಂ॥ ಪಿನದೆರೆಯುಂ ನಿಜತನುಭೇ ।
ದನಭೀತಂ ಪರಿಧಿಯೆಂಬ ಪಾಗರಮಂ ತೊ ।
ಟ್ಟನೆ ಪುಗುತಂ ನಡುಬಾನಿಂ ।
ಮನದನ್ನೆ! ತೀಕ್ಷ್ಣಹೇತಿಯುಂ ಪಸರಿಸುವಂ ॥ ೭೨ ॥

ವಿದ್ಯಾಧರಂ—ಕಂ॥ ಪಗಲಾಣ್ಮಂ ಸತ್ಪಥಮ ।
ಧ್ಯಗಭಾವಮನಪ್ಪುಕೆಯ್ಯು ಪೊಣ*ರ್ವೀರ್ಭಟರಂ ॥

ಸೆಗಳಗಡಿಭ್ರಾಗಸಿಂದಿಂ |
ಮಿಗೆ ಸುಡುಗುಂ ಕುವಲಯಾಂಗಿಗಿದುತ್ತರಮಲ್ತೇ || ೨೩ ||

ಇದೆಕೊಳ್ ಮತ್ತಮಿತ್ತಲ್ ಜವನಂತೆ ದುರಾಧರ್ಷನಾದ ಶಿಶುಪಾಲಂ ಮುನಿದು ತನ್ನ ಬಲಕೊದವಿರ್ದಪಜಯಮುಮಂ ಸೈರಿಸದೆಯುದೊಂದಸ್ತ್ರ ಕೌಶಲ್ಯಮಂ ತೋರಿಸಿದಂ.

ಮ || ಸ್ರ || ಕನಲುತ್ತುಂ ಸೀಳ್ದು ಕಾಲೊಳ್ಮಲಮನಮಮತಾಂ ಗ
ರ್ಜಿಸುತ್ತಿರ್ದೆ ವಜ್ರ | ಸ್ವನವೆಂಬಂತಶ್ವಸೈನ್ಯಂಗಳ ನಗಿಸುತಂ ತಮ್ಮ
ಗಂಡಂಗಳೊಳ್ ತೊಟ್ಟನೆ ಸೋರುತ್ತಿರ್ಪದಾನೋದಕದೆ ನನೆಯಿಸುತ್ತುಂ
ಕೆಸರ್ ಪೊಣ್ಮೆಯುದ್ಧಾ | ವನಿಯೊಳ್ಪರುತ್ತು ಮಿಕ್ಕುಗಂ ಚಲಿಪ ಗಿರಿಗ
ಳೆಂಬಂತೆ ಮತ್ತದ್ವಿಪಂಗಳ್ || || ೨೪ ||

ಮತ್ತಂ

ಮ|| ಸ್ರ|| ಕಡಿಯುತ್ತುಂ ಯೋಧರಂ ಸುಂಡಿಲಕೊನೆಗಳ ನೀಳ್ದಿರ್ದ
ದಂತಂಗಳಿಂದಂ | ಪುಡಿಗೆಯ್ದಾತೇರ್ಗಳಂ ಕಾಲ್ಗಳನರೆದು ರಜಂ ವ್ಯೋಮ
ದೊಳ್ ಪೊಣ್ಮೆಸಂ ತಾ || ಗಡ ಕೂಗುತ್ತುಂ ಪತಾಕಾವಳಿಯ ನೆಳೆಯುತಂ
ಮೇಲೆ ಬಿಳ್ದಾರ್ಪಿನಿಂ ದಾ | ಳಿಡಿಸುತ್ತುಂ ಕಾಪ್ಪಿನಿಂದಂ ಬಳಸುತವನಿಯಂ
ಪುಚ್ಚಳಿಕ್ಕುಂ ಗಜಂಗಳ್ || || ೨೫ ||

ವಿದ್ಯಾಧರಿ—ಇವಂ ಹೇರಂಬಾಸ್ತ್ರದಿಂದೆಚ್ಚನೆಂದವನುವಿಪೆಂ. ಈಗಳಾವಗತಿ'

ವೃ || ಕಿವಿಗಳೊಳೆಯೊತ್ತೀಗಳ್ ಮುಂಡಿದಾಗಾಳನೀಡುಂ |
ದಿವದೊಳೆಸೆವ ಮೇಘಸ್ತೋಮಮಂ ಪಾರಿಸಲ್ ಪೊ ||
ಣ್ಮವಮದಜಲದೊಳ್ಕ್ರೇಣ್ಯುತ್ತಿಯಿಂ ಭೃಂಗಬೃಂದಂ |
ಕವಿಯೆ ಕರಿಗಳೆಮ್ಮಂ ಬಾಗುಳಕ್ಕುಂಬುಗೆಯ್ಯುಂ || ೨೬ ||

ಇನ್ನೀರಕ್ಕಸವಗೆಯ ನೇಗೆಯ್ವನೊ ತಿಳಿಯೆಂ.

ವಿದ್ಯಾಧರಂ— ಎಲೆ ಮುಗುದೆ! ಆರೆನಾನಿಸವರಿಜಾ ತಳೆ ದಿಗ್ ಸಾಲೆ ಳ್ಳಂಗಿದೆನಿತರದು ! ನೋಡು ನೋಡು.

ಚಂ || ಮ || ಇದೊನಗಬೃಂದಮಂ ಕಡಿದಸಗ್ಗಿಗರಾಣ್ಮನ ತೋ
ರ್ಪವಜ್ರದಂ | ದದೆಕಡುಗೊರಮಾದುಗುರ್ಗಳಿಂ ಮದವಾರಣ ಮಸ್ತಕಂ
ಗಳಂ || ಸದೆಯುತ ಚೆಲ್ಲಿಮುತ್ತುಗಳ ನುರ್ವಿಯೊಳಂಜಿಸಿ ನೋಟದಿಂದೆ
ಕೋ | ಪದೆಪಣೆಯಲ್ಲಿ ಪ್ರವರ್ಗಕುಣಿಯುತ್ತಿರೆ ಕೇಸರಿಗಳ್ಪ್ರಯುಲ್ಬಗಂ |

ವಿದ್ಯಾಧರಿ – ( ಪೆಳರ್ಕೆಯಿಂ ನಿಟ್ಟುಸಿ ) ಈಮೃಗಲ್ಯೋಕರ್ಗಳಂ ನಾರಸಿಂಹಾಸ್ತ್ರ)
ದಿಂದೆಚ್ಚನೆಂದನುಪಿಪೆಂ. ಎಲೆ ಕಾಂತ ಇತ್ತಲೈಸೆ ;

ಚಂ || ಮ || ಕರಿಗಳ ಮಾಂಸಪಿಂಡಮದು ಸಿಲ್ಕಿರೆ ದಾಡೆಗಳಲ್ಲಿ ರಕ್ತ
ಮಾ | ಗಿರೆ ಮೊಗಮೆಲ್ಲಮುಂ ನಿಡಿದೆನಿಪ್ಪ ವಿಲೋಲರಸಜ್ಞೆಯೊಪ್ಪಿರಲ್ ||
ಹರಿಗಳತೀವರೌದ್ರಮೆನೆ ಪುರ್ವುಗಳಿಂ ಪೆಳರಂಪಳಂಚಿಸಿಂ | ಧುರಶಿರಮಂ
ಕಡಂಗಿ ಬಿಡದೇರುತೆ ಗರ್ಜಿಸುತಿರ್ಕುಮೀಕ್ಷಿಸಾ || || ೩೮ ||

ಮತ್ತಂ

ಉ || ಮ || ವಾರಣದಾನವಾರಿಯೊಳಗಾಜಡೆಗಳ್ ನನೆಯಲ್ ಭಯಂಕರಾ |
ಕಾರಸುಗೊಂದವಾಂತು ನಿಜವಾಲಮನೆತ್ತುತೆ ಸಿಂಹಸಂಕುಲಂ || ಮಾರುಲಿ
ಯುತ್ತಿರಲ್ ಸಕಲದಿಙ್ಮುಖಮುಂ ಮಿಗೆ ಗರ್ಜಿಸುತ್ತೆ ತಾಂ | ಪಾರುತೆ ಭೀ
ತಿಯಂ ಕರಿಸಮೂಹಕೆ ಸಾರ್ಚುತಮಿರ್ಕುಮೆತ್ತಲುಂ || ೩೯ ||

ವಿದ್ಯಾಧರಂ—ಮ || ಸ್ರ || ಇದು ಕಲ್ಪಾಂತೋಜ್ಜ್ವಲತ್ಪಾವಕನಿನೊಗೆದು ತಳ್ತ
ರ್ಪಧೂಮೌಘಮೋ ! ಮೇ | ಣಿದು ಕಾಳಿಂದೀತರಂಗ ಪ್ರಕರಮೊ ! ಭ
ಯಮಂ ಸಾರ್ಚುಗುಂ ನೋಟಕರ್ಗಂ || ತಿದುಮೇಣ್ ಕಲ್ಪಾಂತಲಾಸ್ಯೋ
ಲ್ಲಸಿತ ಕುಪಿತಕಾಳೀಚಲತ್ಕೈಶ್ಯಮೋ ! ಪೇಳ್ | ಳದೆನಲ್ ದಿವ್ಯೇಕ್ಷಣಂಗ
ಳ್ ಮೂರ್ಗಿಯೆ ಮುಸುಕಿದತ್ತೀಗಳತ್ತಂ ತಮಿಸ್ರಂ || || ೪೦ ||

ವಿದ್ಯಾಧರಿ—ಪಜ್ಜಳಿಪ್ಪ ಮಾರ್ತಾಂಡಬಿಂಬದಿಂ ತೊಳಗುವ ನಡುವಗಲೊ
ಳಂ ಜಗಮೆಲ್ಲಮುಂ ಗಾಢಾಂಧಕಾರದೊಳ್ಮುಳ್ಗಿರ್ದು ಬಿಸಮಂದ
ಮಲ್ತೆ. ಅತಿದುರ್ಗಮಮಾದ ಕೆಸರ್ಗಳನೊಳ್ಮುಳುಂಗಿದರ ತೆರ
ದಿಂದೇನುಗುಮೆತ್ತಲುಂ ಕಾಣಿಸದು. ಅಚ್ಚರಿ ಅಚ್ಚರಿ !

ವಿದ್ಯಾಧರಂ.—ಪ್ರಿಯೇ! ಅಂತಾದಿರಂಜನೆ! ಈಗಳೆನಗೆ ತಿಳಿದುದು. ಇದು ಜರಾಸಂಧನೆಚ್ಚ ಅಂಧಕಾರಾಸ್ತ್ರ ಪ್ರಶಸ್ತಿಯಲ್ತೆ. ಇತ್ತ ನೋಡ;

ಮ ॥ ವಿ ॥ ತೊಳಪಾ ಚಂದ್ರನ ನೇಸುತ್ತುರಿವ ವಹ್ನಿಜ್ವಾಲೆಯಿಂ ಬಂತೆವೋಲ್ । ಪೆಳರಂ ಸಾರ್ಚುತೆ ಸಂಜೆಯೊಳ್ಮೆರೆವ ಮಾರ್ತಾಂಡಂಬೊಲೊಪ್ಪುತ್ತೆಕಣ್ । ಗೊಳಿಸುತಂ ಸಂಪಗೆ ಪೂವಿನಂತೆ ಹರಿಕೋದಂಡೋತ್ಥಿತಂ ಕಾಂಡಸಂ । ಕುಲಮೊಡ್ಡಿಕ್ಕಿನೊಳಿರ್ದ ಕಳ್ತಲೆಯುಮಂ ಪೋಳ್ದಿಯ್ಯುರಾರಾಜಿಕುಂ ॥ ॥ ೮೧ ॥

ವಿದ್ಯಾಧರಂ—ಆಃ! ಈ ಪ್ರಭಾಕರಾಸ್ತ್ರದಿ ನೆಚ್ಚ ಮಾತ್ರಮೆಸವಲ್ತಹವೆಂಬವೋಲಾದುದು ಇನ್ನುಮುಂ ಮುಂತೆವೋಗಿ ನಿರ್ಧಯುಮಾಗಿನೋಳ್ಪಂ

(ಎಂದು ಮುಂತೆವೋಗಿ ನಿಟ್ಟಿಸಿ)

ಕಂ ॥ ಕಡೆಗಾಲದೆಳೆಮೊಯಿಕ್ಕದೆ ।
ಕಡುಮುನಿಸೊಂದಿರ್ದ ರುದ್ರನಾಪಣೆಗಣ್ಣಿಂ ॥
ಸುಡುತೊಗೆವಗಿನಿವೊಲಚ್ಚರಿ ।
ವಡಿಕುಂ ಪ್ರಭಾಕರಾಸ್ತ್ರಮೆಸೆಯುತೆ ಕಳಿಯಿಂ ॥ ೮೨ ॥

ಮತ್ತಂ.

ಚಂ ॥ ಮಾ ॥ ಜಳಮಳುರುತ್ತೆ ಭೀತಿವಡಿಸಲ್ ನಡೆಮಾಡದೊಳಿರ್ದ ಸಗ್ಗಿಗ । ರ್ಕಳನುರೆ ಚಕ್ರವಾಳಗಿರಿಸಾನುವನಾ ಪೊಗೆ ತಾಂ ಮುಸುಂಕಿರಲ್ ॥ ಜ್ವಲಿಸುತಮಿರ್ದ ದಳ್ಳುರಿಯೊಳಳ್ಕೆಯ ನೊಂದಿಸಿಕುರ್ಗಿಸುತ್ತಸುಂ । ಗೊಳಿಸುತಿರಲೆಲ್ಲಲೋಕಮುಮನೀದಹನಂ ಸುಡುವಂತೆ ತೋರುಗುಂ ॥ ೮೩ ॥

ವಿದ್ಯಾಧರಂ—ಈಗಳ್ ಶಿಶುಪಾಲ ಪ್ರಯುಕ್ತಮಾದಾಗ್ನೇಯಾಸ್ತ್ರಮಂ ತವಿಸಲೆಂದು ಸಾಜದಿಂ ಸಕಲಲೋಕ ಸಂತಾಪಹಾರಿಯಾದೀ ಕಂಸಾರಿ ವಾರುಣಾಸ್ತ್ರದಿಂ ತೆಗೆನೆರೆದೆಚ್ಚಂ. ಇದೊ ನೋಡು ನೋಡು.

ಮ ॥ ವಿ ॥ ವಿಲಸದ್ಭೈರವ ಹಸ್ತದಿಂದೊಗೆದು ಘಕ್ಕಾನಿಸ್ವನಂ ನಾಡೆ

ಮಾ | ರುಲಿಯುಲ್ ದಿಗ್ಗಜಮಂಡಲಂ ಸುಗಿವವೋಲ್ ತಾಂ ಗರ್ಜಿಸುತ್ತೀಗ
ಳೀ || ಜಲದಂಗಳ್ ಸೆಳೆಮಿಂಚಿನಿಂದೆ ಸೆರೆಗೆಯ್ಯುತ್ತುಂ ನಭಃಪ್ರಾಂತಮಂ |
ನೆಲನಂ ಧಾರೆಗಳಿಂ ಸಮುದ್ರಮೆಸಗುತ್ತುಂ ಪಾರುಗುಂ ವ್ಯೋಮದೊಳ್ ||

ವಿದ್ಯಾಧರಿ— ಎಲೆ ಕಾಂತ! ಸೀರ್ಪನಿಗಳಿಂದಖಿಲದಿಙ್ಮಂಡಲಂಗಳುಮಂ ತಣ್ಪಿಸಿ, ಆ ಭಯಂಕರನಾದ ಕಿಚ್ಚುಂ ತವಿಸಿ, ಈ ಮೇಘಂಗಳೀಗಳೆಮ್ಮಂ ಮಳೆಗಾಲಮೆಂಬಿನಂ ಕಳಕೋರ್ಪಡಿಸುತಿರ್ಕುಂ. ಇದೊ ;

ಕಂ || ನೆರೆಕೃಷ್ಣಾಭ್ರಂ ಸುರಿಯಲ್ |
ಶರಧಾರೆಯ ನಹಹ ರಾಜಹಂಸಸಮೂಹಂ ||
ಭರದಿಂ ಬಳಸಾರ್ದುದು ಪು ||
ಷ್ಕರಮಧ್ಯದೊಳಿರ್ಪ ಹಂಸಮಂಡಲಮಂ ತಾಂ || ೮೫ ||

ವಿದ್ಯಾಧರಂ-- (ನಲ್ಮೆವೆತ್ತು ಕಟ್ಟಿಳ್ಕೆಗೊಂಡು) ಪ್ರಿಯೇ! ಇಂತಪ್ಪ ರಣಾಗ್ರದೊಳುಂ ನಿನ್ನ ಶ್ಲೇಷ ವಚನ ಚಮತ್ಕಾರಮುಂ ತೋರುವೆಗಡಾ.

ವಿದ್ಯಾಧರಿ—ನಿನಗೆನ್ನೊಳಿರ್ಪೆರಕಮಿಂತು ಬಿಸವಂದಂಗೊಳ್ಪುದಲ್ಲದೆ ನನ್ನ ಜಾಣ್ಮೆಯಲ್ತು. (ಎಂದು ಬೆಕ್ಕಸಂಗೊಂಡು ನಾಲ್ದೆಸೆಯುಮಂ ನಿಟ್ಟಿಸುತೆ) ಎಲೆಕಾಂತ!

ಮ || ವಿ || ರಸನಾಯುಗ್ಮಮನಂದದಿಂ ಪಸರಿಸುತ್ತುಂ ಕಕ್ಕುತಂ ನಂ
ಜನಾ | ಗಸದೊಳ್ ಖೇಚರರಂ ಸಮಂತುಪೊಗೆಯಿಂದಂ ಬಾಗುಳ್ಕಿರ್ಕಗೆ ||
ಯ್ದುಸಿತವ್ಯಾಳಕುಲಂ ಫಣಾಮಣಿಗಳಿಂದಂ ನಾಡೆ ಖದ್ಯೋತಮಾ | ಗಿಸು
ತಂ ನೇಸರನೀಗಳ್ ಚಿಪುದು ಮೂಲೋಕಂಗಳಂ ದಾಡೆಯಿಂ || ೮೬ ||

ವಿದ್ಯಾಧರಂ—ಪ್ರಿಯೇ! ಅಂಜದಿರಂಜದಿರ್. ಇದು ಪ್ರಕೃತಿಕುಟಿಲನಾದ ಪೌಂಡ್ರಕನೆಚ್ಚ ಪನ್ನಗಾಸ್ತ್ರದ ಮೈಮೆಯಲ್ತೆ. ಎಳಮೆಯೊಳೆ ಕಾಳೀಯಾಭಿಷಂಗಮನೊಡರ್ಚಿದ ಗರುಡಧ್ವಜಂಗಿನಿತರದು. ನೋಡು ನೋಡು.

ಮ ॥ ವಿ ॥ ಮರನಂ ಕಿಳ್ತುರುಳಿಪ್ಪ ಪಕ್ಷಪವನಂ ಗಂಗಾತರಂಗಂಗಳಂ । ಭರದಿಂದಂ ಕದಡುತ್ತೆ ಸೂಸೆನೆಲನೊಳ್ ತಂದಲ್ಗಳಂ ಚಂಚುವಿಂ ॥ ದುರಗಾಧೀಶ ಫಣಾಮಣಿ ಪ್ರಕರಮಂ ಬೀಸಾಡಿರಂಜಿಪ್ಪ ಪು । ಷ್ಕರದೊಳ್ ಕಂಪನಮುರ್ವರಗಂ ಗರುಡನಂದೋಹಂ ದಿನೇಶಪ್ರಭಂ ॥ ೮೭ ॥

ವಿದ್ಯಾಧರಿ—ಕಂ ॥ ವರಚಕ್ರಾಯುಧವಂತಿರೆ ।

ಮಿರುಗುವ ಕೂರುಗು*ರ್ಗಳಿಂದೆ ಫಣಿಗಳನಿರಿದಂ ॥

ಬರದೊಳ್ ಸೊಗಯಿಪುದಿದೆಕೊಳ್ ।

ಗರುಡಕುಲಂ ಕನಕಹೃದ್ಯಪಕ್ಷೋಲ್ಲಸಿತಂ ॥ ೮೮ ॥

ಆಃ ! ಈ ಪುಣ್ಯದರ್ಶನಂಗಳಾದ ಸಿರಿಯರಸನ ತೇರ್ಗಳ್ಗೆ ಕುಂಬಿಡುವೆಂ. ಇನ್ನೆಲ್ಲಮುಂ ಭದ್ರಮಕ್ಕುಮೆಂದಾಂ ಭಾವಿಪೆಂ.

ಭಳರೆ ! ಭಳರೆ ! ಇದೆಕೊಳ್

ಕಂ ॥ ಕೆಲದೊಳ್ ಜಡೆಗಳ್ ಸಡಿಲುತ ।

ಮೊಳಲ್ದಿರಲ್ ಬಾಷ್ಪಮೊಗೆಯೆ ಬೆಮರ್ದಿ*ರಲಾಸ್ಯಂ ॥

ತಳದೊಳ್ಪಿಡಿಯುತೆ ಬೀಣೆಯ ।

ನಲಸದೆ ಕುಣಿಗುಂಗಡೊಲ್ದು ನಾರದಮುನಿಪಂ ॥ ೮೯ ॥

ಮ ॥ ವಿ ॥ ಸಡಿಲುತ್ತುಂ ಕರದಿಂದೆ ನುಣ್ಬಳುಕೆ ನಾರಂ ಬಿರ್ಗ್ದುಡುಂ ನೋಡದೀ । ಗಡ ಸಂಗ್ರಾಮ ಕುತೂಹಲಂ ನಲಿವು ವೀಣಾದಂಡದಿಂ ಬೇರ್ಪಡು ॥ ತ್ತಿಡೆಪುಲ್ಕೊಳ್ವೇಲೆಣಿಸುತ್ತೆ ಸಂತಸದೆ ಬೊಮ್ಮಾನಂದಮಂ ಯುದ್ಧಮಂ । ಕಡುರಾಗಂ ದಳೆದೀಕ್ಷಿಸುತ್ತೆ ತಣಿವಂ ರೋಡಾಡಿದಂ ನಾರದಂ ॥ ೯೦ ॥

ವಿದ್ಯಾಧರಂ—ಕಂ ॥ ಮುದಮೊಗೆವುದು ಸಹಜಂ ಗಡ ।

ಪದಪಿಂದಾರಯ್ಯೆ ಸಾಂಖ್ಯಕುಶಲಂಗೀ ನಾ ।

ರದಮುನಿಗಂತಾದೊಡಮಿಂ ।

ದೊದವಿದ ಸಂಗರದೆ ಹರ್ಷಮೊಗೆವುದು ಚಿತ್ರಂ ॥ ೯೧ ॥

ಪ್ರಿಯೇ ! ಇದೊ ನೋಡುನೋಡು ಈ ಕೃಷ್ಣನ್ಸೈಸೆ ;

ಮ || ವಿ || ಜಲದಂಗಳ್ ಕಡೆಗಾಲದೊಳ್ಮೊಳಗುವಂತೀಚಾಪದಿಂ
ಪುಟ್ಟಿ ಕೂ | ರುಲಿ ಯೀಮಾಧವನಾರ್ಪಿನಿಂದಿಸುತೆತಾಂ ಬಾಣಂಗಳಂ
ಸುತ್ತಲುಂ || ಮುಳಿಯುತ್ತಂ ಶಿಶುಪಾಲನೆಲ್ಲಿದನೊ ಮೇಣ್ಸಾಲ್ವನೆಲ್ಲಿರ್ಪನೆಂ|
ದುಲಿಯುತ್ತಂ ಪಡೆಯಂತವಿಪ್ಪನಿದೊ ಮುನ್ನೀರಂ ಕಡಲ್ಗಿಚ್ಚುವೊಲ್ ||

ವಿದ್ಯಾಧರಿ — ಚಂ|| ಮಾ|| ಇದೊಇದೊ ಭೀತಿಯೊಳ್ಮುಳುಗಿ ಭಗ್ನಮನೋರ
ಥರಾಗಿ ಲಜ್ಜೆಯಿಂ | ಚದರುತೆ ದುರ್ಗಗುಲ್ಮ ಗುಹಕಂದರಮಧ್ಯ
ದೊಳಿರ್ಪ ಮಾರ್ಗಮಂ || ಪದೆದರಸುತ್ತೆ ಕೃಷ್ಣನ ಸೆಲ್ಗಳನಾಹತರಾಗಿ
ನಾಡೆಕಂ | ದಿದನೊಗೆವೊಂದುತಂ ಚಳಕದಿಂದಿರದಾಗಡಿರಾಯ ರೋ
ಡುಗುಂ || ||೯೩||

( ಜವನಿಕೆಯೊಳ್ )

ಮ|| ವಿ|| ಎಲೆಲೇ! ಸಾಲ್ವ ರಣಾಗ್ರದಿಂ ಸುಗಿದು ನೀಂ ಪೋಳೇಳ್ವು
ದೇಂ ಯುಕ್ತಮೇ | ನೆಲೆಕೇಡಾಳ! ಅದೆಲ್ಲಿಗೋಡುವೆ? ಜರಾಸಂಧಾಖ್ಯ!
ಪೇಳ್ ಬಿಂಕದಿಂ || ಗಳಪುತ್ತಾಗಳೆ ಪ್ರಾಣ್ದಪ್ರಾಣಿಸನದೇಗೆಯ್ದಿರ್ಪೆ?
ಚೈದ್ಯೇಶ್ವರಾ! | ಲಲನಾರತ್ನಮನೊಂದು ದಾವದೆಸೆಯಿಂ ಪೊಕ್ಕಿರ್ಪೆ?
ಶೌರ್ಯಾಂಚಿತಾ! || ||೯೪||

ವಿದ್ಯಾಧರಿ—ಆಃ! ಮುಳಿದಿರ್ಪ ಕೃಷ್ಣಂ ಶಿಶುಪಾಲನಂ ಪಳಿಯುತ್ತಿರ್ದೊಡ
ಮವಂ ರುಕ್ಮಿಣಿಯುಮಂ ಜಯಲಕ್ಷ್ಮಿಯುಮಂ ರಕ್ಕಸವಗೆಯುಂ
ಗೊಪ್ಪಿಸಿ ಪರಿವ್ರೇದಂ. ಇನ್ನೀಕೃಷ್ಣನೊಳ್ ಪೋಣರ್ಪಲದಾ
ವನಾರ್ಪನೊ ತಿಳಿಯೆಂ.

( ಮತ್ತಂ ಜವನಿಕೆಯೊಳ್ )

ಕಂ || ಬಿಡುಬಿಡು ತಂಗಿಯನೀಂಗಳ್ |
ಪಡಿನುಡಿಯದೆ ತೋರುನಿನ್ನ ಸಾಸಮನೆಮ್ಮೊಳ್ ||
ಫಡಫಡ ಕನ್ಯಾರ್ಥಿಗಳಂ |
ಗಡಸಿಡೆಯಿಸುತಹಹ ಬೆರೆತುಬೀಗುವೆ ಮರುಳೇ ||೯೫||

ವಿದ್ಯಾಧರಿ—ಎಲೆ ಕಾಂತ ! ಮುಗಿಲ್ದನಿಗೆಣೆವರ್ಪ ಕಠೋರವಾದ ಕಂಠರವದಿಂ ಗರ್ಜಿಸುತೆ ತನ್ನ ಪಡೆಯ ತುಮುಲದ ಸರದಿಂದೆಣ್ದೆಸೆಯುಮಂ ಪಳಂಚಲೆಯಿಸಿ ಕೃಷ್ಣನೊಳ್ ಮತ್ತಂ ಪೋರ್ಕಾಳ್ಕೆಳಸುತಿರ್ಪನಿವನದಾವಂ ?

ವಿದ್ಯಾಧರಂ—ಇವನ್ಯೆಸೆ ; ರಿಪುಕುಂಭೀಷ್ಮನೆನಿಸಿದ ಭೀಷ್ಮಕನ ಜ್ಯೇಷ್ಠಕುಮಾರನಾದ ರುಕ್ಮಿ. ತನ್ನ ತಂಗಿಯುಂ ಕೃಷ್ಣನತ್ತಣಿಂ ಬಿಡುತೆಗೊಳಿಸಿ ಕರೆದುಯ್ವೆಲ್ಕೆ ಸಾಸದಿಂ ಕೋದಂಡದ ಪೆದೆಯುಂ ತೆಗೆದರೆದು ಪುಣಂಬಗಳನಿಸುತೆ ಮರುಪಸಲರ ನೊಕ್ಕಲಿಕ್ಕಿ ಧರೆಯೊಳಗುರುಳ್ಚಿ ಚಿತ್ರತರವಾಗಿ ಕಾದಿ ಸಿದ್ಧಸಾಧ್ಯವಿದ್ಯಾಧರರ್ ಮೆಚ್ಚುವಂತಿರೆ ಪೋರ್ಕಳ್ ಸರಲ್ಮಳೆಗರೆದು ನಾಲ್ದೆಸೆಳನಂ ಮುಳಯಿಸಿದಂ.

ವಿದ್ಯಾಧರಿ—ಆಃ ಇವನ ಬಲ್ಮೆಯನೇವಣ್ಣಿಪೆಂ. ದೈತ್ಯಕುಲಕಾಲಮೃತ್ಯುವಂ ಗೆಲಲೆಳಸಿಪೀರ್ಗಾಂಪನೇನಪ್ಪನೊ ತಿಳಿಯೆಂ.

ವಿದ್ಯಾಧರಂ—ಎಲೆ ಕಾಂತೇ ! ನೋಡುನೋಡು. ಈ ಸಿರಿಯುರಸಂ ಮಾಮಸಕಂ ಮುಸಗಿ ತೂಲಮಂ ವಾತೂಲನಂತಿರೆಯುಮುಡಗ ನಗಿನಿಯುಂತಿರೆಯುಂ, ರುಕ್ಮಿಯ ಸೈನ್ಯಮಂ ಸದೆಲ್ಗಿಚ್ಚಿಗಾಹುತಿಗೆಯ್ದು "ಎಲೆ ಚೈದ್ಯಬಂಧುವೆ ! ನಿನ್ನೀ ಅವಿನಿಯಕೆ ತಕ್ಕಫಲಮನನುಭವಿಸ" ಎಂದು ಪೆದೆಯುಂ ತೆಗೆದೆರೆದು ;

ಮಾ॥ ಕಡಿಯುತೆರಡು ಕೋಲಿಂ ಸೂತನಂ ಧನ್ವಮಂ ಮೇಣ್ ।
ಕೆಡಪುತೆನೆಲನೊಳ್ನಾಲ್ಕಂಬಿನಿಂದಾರುಕೋಲಿಂ ॥
ಜಡುಗಿಸಿ ರಥವಾಜಿ ಸ್ತೋಮಮಂ ಕೆಮ್ಮನೀಗಳ್ ।
ಮಿಡುಗಿಪನಿದೊ ನೀಡುಂ ರುಕ್ಮಿಯುಂ ಬಾಣದಿಂದಂ ॥೯೬॥

ವಿದ್ಯಾಧರಿ—ಇನ್ನಿಂತು ಮಾಮುಸಕಂ ಮುಸಗಿದೀ ಪರ್ದುದೇರ ನಿವನಂಮುತ್ತಮಾವಳ್ಕೆಗಿರ್ಕಗಯ್ವನೊ ! ಎಂದೆನ್ನಬಗೆಯುಗಿವುದು. ಮೇಣ್ ರುಕ್ಮಿಣಿಯುಗ್ರಜಂಗೆ ಕೃಷ್ಣನೆ ವಿಪತ್ತನಮೊರ್ಚುವನೇಂ ?

ವಿದ್ಯಾಧರಿ—ಘಡಘಡ. ಅಸೆಕಳೆದುದು.

ಮ|| ವಿ|| ಸೆಳೆಮಿಂಚೆಂಬ ವೊಲಿರ್ಪ ಬಾಳನೆಸೆಯಲ್ ನಾಲ್ದಿಕ್ಕುಗಳ್ ಹಸ್ತದೊಳ್ | ಬೆಳಗುತ್ತಿರ್ಪಸಿ ತಾಂನಡುಂಗೆ ರಿಪುಸೈನ್ಯಂಬೊಲ್ ಖಗಾದೀಶ್ವರಂ || ವಿಲಸನ್ನಾಗಮನಾರ್ಪಿನಿಂ ಪಿಡಿವವೋಲೀ ರುಕ್ಮಿಯಂ ಕೆಯ್ಗಳೊಳ್ | ಮುಳಿಸಿಂದಂ ಪಿಡಿಯುತ್ತೆ ಕಾಲಿನೊದೆವಂ ನೋಡಿತ್ತಲೀಮಾಧವಂ || ||೯೭||

ವಿದ್ಯಾಧರಿ— ಎಲೆ ಕಾಂತ! ನಿಟ್ಟಿಸು ನಿಟ್ಟಿಸು ಈ ರುಕ್ಮಿಣಿ ಕಂಸಾಂತಕಂ ಗಡಿಗಡಿಗಂ ಸಂಭ್ರಮದಿಂ ಸುಗಿದು ಕುಂಬಿಡುತಿರ್ದೊಡಮೀರಾಕ್ಷಸಾಂತಕನವನಂ ತನ್ನ ತೇರ್ಗಂಬಕ್ಕೆ ಬಿಗಿದುಕಟ್ಟಿ ಮೈದುನನೊಳ್ ಸಬ್ಬಮವೊಡರ್ಚುವ ತೆರದಿಂ ಕ್ಷುರಕಲ್ಪಮಾದ ತನ್ನ ಖಳ್ಗದಿಂದವನ ಶ್ಮಶ್ರು ಕೇಶಪಾಶಂಗಳಂ ಕತ್ತರಿಸಿಬಿಡುತಿಗೊಳಿಸಿದಂ.

ವಿದ್ಯಾಧರಂ—ಪ್ರಿಯೇ! ಕಷ್ಟಂಕಷ್ಟಂ.

ಮ|| ವಿ|| ತಳಗೆಳ್ ತಾಳ್ದತೆ ಬಿಲ್ಲನಾತ್ಮಯಶಮಂ ವ್ಯಾಮರ್ಣಿಸುತ್ತಂ ಕರಂ | ಪಳಯುತ್ತಂ ಸುಗಿದೋಡುತಿರ್ಪ ನೃಪರಂ ನಾಲ್ದಿಕ್ಕಿನಿಂ ಪಾರ್ವ್ಯಕೋ || ಲ್ಗಳಸಾವಂ ಬಳಲುತ್ತೆ ದಾಳಿಡುವ ಕೃತ್ತಶ್ಮಶ್ರುವೀಬಲ್ಲಿದಂ | ಪೊಳಲೊಳ್ ನಾಣ್ಚದೆ ಪೌರರಂ ಸತಿಯರಂ ತಾನೆಂತು ಪೇಳ್ ನೋಳ್ಪನೋ |

ವಿದ್ಯಾಧರಿ—ಅಂತಾದೊಡಂ ಬಳಯಂ ಬಲರಾಮಂ ರುಕ್ಮಿಯಂ ಬಹುಮಾನಪುರಸ್ಸರಂ ಸಂತವಿಟ್ಟು ಕಳುಪಿದಂ. ಇನ್ನುಂ ನೋಳ್ಪನೋಟಂಗಳಕರ್ಮಮಲ್ತೆ,

ಚ|| ಮಾ|| ಬೆಮರ್ಪನಿಮೂಡೆ ಮುಗ್ಧಮೆನಿಪಾನನದೊಳ್ ಮರವೀರಲಕ್ಷ್ಮೀತಾನಮರ್ದಿರೆ ಚೆಲ್ವಿನಿಂ ಬಗೆಗೊಳುತ್ತೆ ವಿಕಾಸಮನಾಂತು ತೋರುವಾ | ಕಮಲದ ಪತ್ರದಂತೆ ಬಹುರಕ್ತಮೆನಿಪ್ಪ ನಿಜಾಕ್ಷಿಯೊಪ್ಪೆವೋ | ದನುಸುರೆತಾಳ್ದತಂ ನಗುವನೀಪುರುಷೋತ್ತಮನಿತ್ತಲೀಕ್ಷಿಸಾ ||೯೯||

( ಮತ್ತಮೌತ್ಸುಕ್ಯಮೊಂದಿ )

ಚಃ ॥ ಮಾ ॥ ಪೆಳರಿನಪಾಂಗಮೊಂದಾತುರೆಬಾಗುಳಮಂ ಮುದದಿಂ ವಿಕಾಸಮಂ। ತಳೆದರಲೀಗಳೀ ಸರಸಿಜೇಕ್ಷಣೆ ರುಕ್ಮಿಣಿ ಮಾಡಿದೊಲ್ಮೆಯಿಂ॥ ಭಳಿರೆ ! ಅದೊಂದು ಚೆಲ್ವನೊಳಗೊಂಡೆಮೆಯಿಕ್ಕದೆ ಜೀವಿತೇಶನಂ। ನಲಿಯುತೆ ನೋಡಿನೋಡಿ ಯಣಮುಂತಣಿಯಳ್ಗಡ ಮತ್ತೆಮತ್ತೆತಾಂ ॥ ೧೦೦ ॥

ವಿದ್ಯಾಧರಂ—( ಮೇಗೆನೋಡಿ ) ಪ್ರಿಯೇ ! ನೋಡುನೋಡು.

ಕಂ ॥ ಪರಿಮಳಮ ನೆಳಸುತೆರಗುವ ।
ಪರಮೋಗ್ಗಂಚರಮದೆ ಪ್ಪೆದೆಸೆಗಳೊಳೆಲ್ಲಂ ॥
ಸುರನಂದನ ಕುಸುಮಂಗಳ್ ।
ಸರಿಸುರಿವುವು ಗಗನದತ್ತಣಿ ಸೊಗಯಿಸುತಂ ॥ ೧೦೧ ॥

(ಅಗಳ ದಿವದೊಳ್ಕಿಂದು ಮೊನೆಯಂ ಮನಮೊಲ್ದು ನೋಡುತಿರ್ಪರಸಿಗಳ್ )

ಮ॥ ವಿ॥ ವರನಾಭೀಸಂಸೀಜಜಾಲ ಕಾಹನಾಸಂಸಾರದೊಳ್ ಭಾಂಡದಂ । ತಿರೆ ಲೋಕಂಗಳನೆಲ್ಲಮಂ ಸಮೆದ ವೇದಾಂ ಸೋಜನೀ ಭಾಸ್ಕರಾ ॥ ಚರಣಾಂಗುಷ್ಠ ನಖಪ್ರಸೂತ ತಟನೀಪೂತಾವನೀಮಂಡಲಾ ! । ಮೊರೆಭೂಭಾರಮನೊಲ್ಮೆಯಿಂದಿಳಿಪುತಂ ಕಾರುಣ್ಯರತ್ನಾಕರಾ ! ॥ ೧೦೨ ॥

( ಎಂದು ಪೊಗಳ್ದರ್ )

ವಿದ್ಯಾಧರಿ—ಅಂತಾದೊಡೆ ಕೃತಾರ್ಥನಾಪೀ ಶ್ರೀಕೃಷ್ಣಂ ರುಕ್ಮಿಣಿವೆರಸು ತನ್ನ ಪೊಳಲಂ ಸಾರ್ದಪಂ. ( ಎಂದು ನಗುತೆ ) ಎಲೆ ಕಾಂತ ! ಅಚ್ಚರಿ ಅಚ್ಚರಿ ! ಇತ್ತಲೀಕ್ಷಿಸ. ತನ್ನಣುಗಂಗೀಗಳಾದಪಮಾನಮಂ ಕಂಡುಂ ತಿಳಿಯದನ ಮಾಳ್ಕೆಯಿಂದೀಭೀಷ್ಮಕಂ ಮುನ್ನೀರ್ವರ್ಗ್ಗೆಗನೊಳ್ಪನ್ನಬ್ಬೆಯುಮಂ ತೋರಲೆಳಸಿ ಸಾರ್ತರುತಿರ್ಪಂ.

ವಿದ್ಯಾಧರಂ—ಎಲೆ ಮುಗುದೆ ! ಸ್ನಿಗ್ಧಹೃದಯನಾಪೀ ಭೀಷ್ಮಕಂ ಅಗ್ನಿದ್ಯೋತನನೆಂಬ ನೇರಿದಂಬೆರಸು ಪೀತಾಂಬರನಾದ ತನ್ನಳಿಯನಂ ಸಂತವಿಡಲೆಂದೈತರ್ಪಂ.

ವಿದ್ಯಾಧರಿ— ಎಲೆ ಕಾಂತ! ನೀನುಸಿರ್ದುದು ದಿಟಂ.

ವಿದ್ಯಾಧರಂ— ಪ್ರಿಯೇ! ನೋಡು ನೋಡು.

ಮ|| ಮಿ|| ಬದವಿರ್ಪ ಕಡುರಾಗದಿಂದೆಸೆವ ತಾರಾಹೃದ್ಯೆಯಂ ಶಯ್ಯೆಯಂ | ಬಿದುವಿಂದೀವರ ಮುಗ್ಧಕಾಂತಿಯೊಲವಿಂ ಕೈಗೊಂಡು ಮೇಣ್ ನೈಜತೇ || ಜದಿನೇಶ್ಚಕ್ರಿನೊಳಿರ್ಪ ಕಳ್ತಲೆಯುಮಂ ಪಾಳ್ಗೆಯ್ಯುತ್ತಂ ಮೊಕ್ಕಳಂ | ಪದಪಿಂ ಭೂಮಿಯೊಳಂ ವಿಯತ್ತಳದೊಳಂ ರಾರಾಜಿಪಂ ಭಾಮಿನೀ || || ೧೦೩ ||

ಇನ್ನೀಭೀಷ್ಮಕನಳಿಯನುಂ ಮಗಳುಂ ಬೆರಸುಬೀಗಂಗೆ ತನ್ನಣ್ಣನ ನೊಡಂಗೊಂಡು ವಿಜಯಲಕ್ಷ್ಮಿವೆಂಸಿದೀ ಶ್ರೀಕೃಷ್ಣಂ ಲೋಕಂಗಳಂ ಪಾಲಿಸುತೆಮ್ಮಂ ನಲವಡಿಸುಗೆ. ಪಿಂದಿರುಗಿ ಪೋಗುತಿರ್ಪ ನಡೆಮಾಡಂಗಳೊಡನಾವುಂ ತೆರಳ್ದಪಂ ನಡೆ. (ಎಂದು ತೆರಳ್ದರ್)

(ಅನಂತರಮಗ್ನಿದ್ಯೋತನ ಭೀಷ್ಮಕ ಬಲರಾಮರ್ವೆರಸು ಕೃಷ್ಣಂಬಂದು)

ಕೃಷ್ಣಂ— ಶಾ|| ವಿ|| ಎಲ್ಲಿರ್ಕುಂ? ಸಕಲಾಭಿಜಾತ ತಿಲಕಂ ಜಾಮಾತರಂಭೂ
ವರಂ| ಎಲ್ಲಿರ್ಕುಂ? ನುಡಿನಿನ್ನ ಸೂನುವಿನ ವೀರತ್ವಂ ಧರಿತ್ರೀವರಾ ||
ಎಲ್ಲಿರ್ಕುಂ ನುಡಿಬೇಗದಿಂದೆಲೆ! ಜರಾಸಂಧಾದಿಗಳ್ ಬಂಧುಗಳ್ ||
ಬಲ್ಲಂ. ನನ್ನನದೇಕೆ ಸಂತವಿಡುವೈ? ಗೋಪಾಲನಂ ಪೆಣ್ಬನಂ ||

ಬಲರಾಮಂ— ಎಲೆ ವತ್ಸ! ಪಿರಿಯರನಿಂತು ಮಾಂಕರಿಸುವುದುಚಿತಮಲ್ತು.
(ಎಂದು ಭೀಷ್ಮಕನತ್ತಲ್ ತಿರುಗಿ) ಎಲೆ ಭೀಷ್ಮಕ!

ಕಂ|| ಅಳಿಯನ ಕಾಳ್ಗೆಯ್ತುಮನೀ |
ಯೆಳೆಯೊಳ್ ಸೈರಿಪುದು ಮಾನನಾದಂಗುಚಿತಂ ||
ಗಳಸಂಸಾರಾಬ್ಧಿಯನೀ |
ಸಂಕ್ಷಮೇನದರಿನಿವನೊಳೊಲವಂ ತೋರಾ || ೧೦೪ ||

ಕೃಷ್ಣಂ—ಕಂ॥ ಎನ್ನಯಕುವರಿಯೆ ಭಾರ್ಗವಿ! |
ಎನ್ನಳಿಯಂ ತೋರ್ಪ ಮೂಜಗಂಗಳ್ಗೊಡೆಯಂ! |
ಬಿನ್ನಣದಿಂ ಬಗೆವೊಡೆಪೇಂ |
ಇನ್ನಾವುದು ಭದ್ರಮಿರ್ಪುಗೆಲೆಬಲಭದ್ರಾ! ॥ ೧೦೬ ॥

ಮತ್ತಂ.

ಕಂ॥ ವರನಂ ಮುಕುಂದನಂ ರಾ |
ಜರಾಜನುತನಂ ಸಶಂಖಪದ್ಮನನೊಲವಿಂ ॥
ಉರುಕಲ್ಯಾಣನಿಧಿಯನುಳ |
ದರಿವಿಲ್ಲದೆಪೆರನನೊಲಿಪಗಾಂಪರು ಪೊಳರೇಂ ॥ ೧೦೭ ॥

ಗ್ನಿದ್ಯೋತನಂ—ಕಂ॥ ನೆರೆಪರಮಪುರುಷನಂ ತಾಂ |
ವರಯಿಸಿನಿನ್ನಣುಗಿ ಧನ್ಯೆಯೆನಿಸಿದಳದರಿಂ ॥
ಪೆರರಂ ನಿನ್ನನ್ನರನಾ |
ನರಿಯೆಂ ಧರೆಯಲ್ಲಿ ಧನ್ಯರಂ ಧರಣೀಶಾ ॥ ೧೦೮ ॥

ಕೃಷ್ಣಂ—ಕಂ॥ ಶ್ರುತಿಪಥಗಾಮಿನಿ ಯೆಂದೆನಿ |
ಸುತಮಾದ್ವಿಜವಚನಮುಮರ್*ದನೇಳಪುದೆಂದೀ ॥
ಕ್ಷಿತಿಯೊಳ್ ನುಡಿವಾ ನುಡಿಸುಧ |
ಲಿತಮಾದುದು ನಿನ್ನ ವಚನದಿಂ ದ್ವಿಜರಾಜಾ ॥ ೧೦೯ ॥

ಗ್ನಿದ್ಯೋತನಂ—ಎಲೆ ಭಗವಂತನಾದ ವಾಸುದೇವ!

ಕಂ॥ ಭವದೀಯಪದಪರಾಗಂ |
ಬುವಿಯೊಳಗಶರಣ್ಯಕುಲ ಮನೋವುದರಿಂದಂ ॥
ತವೆಯಾರಯ್ಯಲ್ ಪುರುಷಾ |
ರ್ಥವ ನಳವಡಿಸಲ್ಕೆ ಸಾಲ್ಗುಮೆಂಬುದು ದಿಟವೈ ॥ ೧೧೦ ॥

ಅಂತಾದೊಡಮೀಗಳ್ನನಗೆ ಪೆರತಾವ ಬಯ್ಕೆಯುಂ ಸಲಿಸವೇಳ್ಕುಂ?

ಕೃಷ್ಣಂ—ಇದರತ್ತಣಿಂ ಬಯ್ಕೆ ಪೆರತಾವುದು ?

ಚಂ॥ ಮಾ॥ ತೊಳಗುವ ರೂಪಿನಾಗರ ಮೆನಿಪ್ಪಿನಿಯಳ್ ದೊರೆಕೊಂಡಳೆನ್ನ ತೋಳ್ಗಳ ಜಯಲಕ್ಷ್ಮಿ ಬೇರೆ ಮೊರೆಕೊಂಡಳಿಳಾಧಿಪ ರಾಜಿಯಲ್ಲಿತಾಂ ॥ ತಳರ್ದರೊರಲ್ದು ಮಂತಣಮೊಡರ್ಚೆ ಮನಸ್ಥಿತವಾದ ಚೈದ್ಯನೊಳ್ । ಸಲೆಸಿರಿಯೊಂದಿದೀನ ನಗೆಪೇಳ್ ಪೆರತಾವುದು ಬಯ್ಕೆಯಿಪ್ಪುದೈ ॥ ॥ ೧೧ ॥

ಅಂತಾಗಿರೆಯುಂ ಮಿದೊಂದಕ್ಕೆ.

(ಭರತವಾಕ್ಯಂ) ಮ ॥ ವಿ ॥ ನಲವಿಂ ಭೂಪತಿಗಳ್ ನಿಜಪ್ರಜೆಗಳಂ ಪಾಲಿಕ್ಕೆ ಸಂಪ್ರೀತಿಯಿಂ । ಮಳೆಯುಂ ನೀಡುತವಿಂದಿರಂ ಸಮಯದೊಳ್ ಕೈಗಾಯ್ಗೆ ತದ್ಭೂಪರಂ। ಇಳೆಯಲ್ಲೀಕೃತಿಪೇಳ್ದನುಂ ಕೃತಿಯುಮಾಪ್ಪುತ್ತಾರ ಕಾರುಣ್ಯದಿಂ । ಬೆಳಗುತ್ತಿರ್ಕುಮೊ ಪೆಂಪಿನಿಂ ಜಯಿಸುಗಾ ಶ್ರೀ ಪಾರ್ವತೀ ಶಂಕರರ್ ॥ ॥ ೧೨ ॥

(ಎನುತನಿಬರುಂ ತೆರಳ್ದರ್)

ಇಂತು

ಕರ್ಣಾಟಕ ಕೃಷ್ಣವಿಜಯವ್ಯಾಯೋಗಂ

ಸಂಪೂರ್ಣಂ.